ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟೆಂಬರ್ 2015
ಬೆಲೆ ರೂ. 1




## ಸಮುಚ್ಚಯದ ದಶಮಾನೋತ್ಸವ ಸಂಭ್ರಮ



ಸ್ಥಳೀಯ ಕಲಾವಿದರಿಂದ
ಜಾನಪದ ನೃತ್ಯ ಪ್ರದರ್ಶನ

ದೆಹಲಿಯಲ್ಲಿ ಗೀತೋತ್ಸವ-2015



# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 12
ಸೆಪ್ಟೆಂಬರ್ 2015, ಬೆಲೆ ರೂ. 1


## ನೇರ ಮಾತು

ದೆಹಲಿ ಕರ್ನಾಟಕ ಸಂಘವು ಭಾರತೀಯ ಮೌಲ್ಯಗಳಾದ ಪ್ರಜಾಸತ್ತಾತ್ಮಕತೆ ಮತ್ತು ಸಂವಿಧಾನಕ್ಕೆ ನೀಡುವ ಪ್ರಾಮುಖ್ಯತೆಗಳನ್ನು ತನ್ನ ಆಡಳಿತದಲ್ಲಿಯೂ ಅಳವಡಿಸಿಕೊಂಡು ಬಂದಿದೆ. ಸಂಘದ ನಿಯಮಾವಳಿಗಳು ಕಾಲಕ್ಕೆ ಬೇಕಾದಂತೆ ಸರ್ವಸದಸ್ಯರ ಅನುಮತಿಯೊಂದಿಗೆ ಬದಲೂ ಆಗಿವೆ. ಸಂಘದ ಅಭಿವೃದ್ಧಿಯ ನೆಪದಲ್ಲಿ ಕೈಗೊಳ್ಳುವ ಕಾರ್ಯಗಳು ಕೆಲವೊಮ್ಮೆ ವಿರೋಧದ ಸೊಲ್ಲುಗಳನ್ನು ಕೇಳಿಕೊಂಡರೂ ಕೊನೆಗೊಮ್ಮೆ ಎಲ್ಲರಿಗೂ ಒಪ್ಪಿಕೊಳ್ಳುವ ರೀತಿಯಲ್ಲಿ ನಡೆಯುತ್ತವೆ. ಈಗಷ್ಟೇ ನಾವು ದಶಮಾನೋತ್ಸವ ಆಚರಿಸಿದ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಹಂತಕ್ಕಿಂತ ಮೊದಲು ಅದರ ರಚನೆಯ ವಿಚಾರದಲ್ಲೂ ಎರಡು ವಿಭಿನ್ನ ಅಭಿಪ್ರಾಯಗಳು ಇದ್ದವು. ಆದರೆ ಅಂದಿನ ಚರ್ಚೆಗಳಿಗೆ ಕಾಲವು ಉತ್ತರಿಸಿದೆ. ಇಂದು ಅವು ಚರ್ಚೆಯ ವಿಷಯಗಳೇ ಅಲ್ಲ.

ನಮ್ಮದೇ ಸಮುಚ್ಚಯ ನಿರ್ಮಾಣವಾದ ಹತ್ತು ವರ್ಷಗಳ ನಂತರ ಈ ವರ್ಷದ ಸರ್ವ ಸದಸ್ಯರ ಮಹಾಸಭೆ ಮತ್ತು ಚುನಾವಣೆಗಳನ್ನು ಸಂಘದ ಸಮುಚ್ಚಯದಲ್ಲಿಯೇ ನಡೆಸುವ ತೀರ್ಮಾನ ಕೈಗೊಂಡಿದ್ದೇವೆ. ಸಂಘದ ಪ್ರತಿಯೊಂದು ಸರ್ವ ಸದಸ್ಯರ ಮಹಾಸಭೆಯು ಪ್ರಜಾಸತ್ತಾತ್ಮಕವಾದ ಚರ್ಚೆಗಳು ಮತ್ತು ಭಿನ್ನ ಭಿನ್ನ ಅಭಿಪ್ರಾಯಗಳ ಪ್ರತಿಪಾದನೆಯಿಂದೆ ನಡೆಯಬೇಕು. ಹಾಗಾಗಿ ಚುನಾವಣೆಯು ಇನ್ನೊಂದು ದಿನ ನಡೆಯುವುದು. ನಾವೆಲ್ಲರೂ ಒಟ್ಟು ಸೇರಿ ಕಟ್ಟಿದ ಈ ಸಂಘದಲ್ಲಿ ಚುನಾವಣೆಯೂ ನಡೆದರೆ ಸಂಘದಲ್ಲಿರುವ ಸೌಕರ್ಯಗಳ ಸದುಪಯೋಗ ಮಾತ್ರವಲ್ಲ ಅನಾವಶ್ಯಕವಾಗಿರುವ ವೆಚ್ಚಗಳನ್ನೂ ನಿಯಂತ್ರಿಸಬಹುದು. ಕಳೆದ ಚುನಾವಣೆಯ ಸಂದರ್ಭದಲ್ಲಿ ಆದ ಸುಮಾರು ಎಂಟು ಲಕ್ಷಕ್ಕಿಂತಲೂ ಮಿಗಿದಾದ ಖರ್ಚಿನ ಒಂದಂಶವನ್ನು ಈ ಸಲದ ಮಹಾಸಭೆ ಮತ್ತು ಚುನಾವಣೆಯಲ್ಲಿ ಉಳಿತಾಯ ಮಾಡಿದರೆ, ಅದನ್ನು ಸಂಘದ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಬಳಸಬಹುದು. ಹಾಗಾಗಿ ನಾವು ಈ ಸಲ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಅಕ್ಟೋಬರ್ 2ರಂದು ಮತ್ತು ಚುನಾವಣೆಯನ್ನು ಅಕ್ಟೋಬರ್ 4 ರ ಭಾನುವಾರದಂದು ನಡೆಸುವುದರಿಂದ ಸದಸ್ಯರಾದ ತಾವೆಲ್ಲರೂ ಸಹಕರಿಸಬೇಕು ಎಂದು ಕೇಳಿಕೊಳ್ಳುವೆನು. ಮತದಾನ ಮುಂಜಾನೆ ಎಂಟು ಗಂಟೆಯಿಂದ ಸಂಜೆ ನಾಲ್ಕರ ತನಕ ನಡೆಯಲಿರುವುದರಿಂದ ನಿಮ್ಮ ಅತ್ಯಮೂಲ್ಯ ಸಮಯವು ವ್ಯರ್ಥವಾಗದು ಎಂದುಕೊಂಡಿದ್ದೇವೆ.

ದೆಹಲಿ ಕರ್ನಾಟಕ ಸಂಘದ ಬಹುತೇಕ ಸದಸ್ಯರ ಆಶೋತ್ತರಗಳನ್ನು ನಾವು ಈ ಎರಡು ವರ್ಷಗಳಲ್ಲಿ ಈಡೇರಿಸಿದ್ದೇವೆ ಎಂಬ ನಂಬಿಕೆ ನಮ್ಮಲ್ಲಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಜತೆಗೆ ಸಂಘವು ಕರ್ನಾಟಕದ ರಾಯಭಾರಿಯಾಗಿ ಮಾಡಬಹುದಾದಂತಹ, ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ದೆಹಲಿಯಲ್ಲಿ ಅಚ್ಚೊತ್ತಿ ನಿಲ್ಲಿಸುವಂತಹ ಕಾರ್ಯಗಳೂ ಈ ಕಾಲದಲ್ಲಿ ನಡೆದುದಕ್ಕೆ ನಮಗೆ ಹೆಮ್ಮೆ ಮತ್ತು ತೃಪ್ತಿಯಿದೆ. ಸಂಘದ ಪ್ರತಿಯೊಬ್ಬ ಸದಸ್ಯರು, ಕರ್ನಾಟಕದ ಕಲಾವಿದರು, ಸರಕಾರದ ಅಧಿಕಾರಿಗಳು ಎಲ್ಲರೂ ನಮಗೆ ಅಪೂರ್ವವಾದ ಸಹಕಾರವನ್ನು ನೀಡಿದ್ದೀರಿ. ನಿಮ್ಮೆಲ್ಲರ ಕೊಡುಗೆಗಳು ನಮ್ಮ ನೆನಪಿನಲ್ಲಿ ಸದಾ ಉಳಿಯುವಂಥವು. ಆದರೆ, ಮುಂದೆ ಮಾಡಬೇಕಾದ ಕಾರ್ಯಗಳೇನೂ ಕಡಿಮೆಯಿಲ್ಲ. ಮುಂದೆ ನೀವು ಆರಿಸಿ ತರುವ ಆಡಳಿತ ಮಂಡಳಿಯೂ ಕನ್ನಡದ ಕೆಲಸವನ್ನು ದೆಹಲಿಯಲ್ಲಿ ನಿರಂತರ ನಡೆಸಿಕೊಂಡು ಬರುವುದೆಂಬ ಭರವಸೆ ನಮಗಿದೆ. ಅಭಿಮತದ ಮುಂದಿನ ಸಂಚಿಕೆಯು ನಿಮ್ಮ ಕೈ ಸೇರುವ ಸಮಯದಲ್ಲಿ ಹೊಸ ಕಾರ್ಯಕಾರಿ ಸಮಿತಿಯು ರಚನೆಯಾಗಲಿದೆ. ನಿಮಗೆಲ್ಲರಿಗೂ ಮನದಾಳದ ಕೃತಜ್ಞತೆಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಪ್ರಸ್ತುತ ಕಾರ್ಯಕಾರಿ ಸಮಿತಿಯು ಅಧಿಕಾರಕ್ಕೆ ಬಂದು ಎರಡು ವರ್ಷಗಳು ತುಂಬಿದೆ. ಅಕ್ಟೋಬರ್ 2ರಂದು ವಾರ್ಷಿಕ ಮಹಾಸಭೆ ಮತ್ತು ಅಕ್ಟೋಬರ್ 4ರಂದು 2015–17ರ ಸಾಲಿನ ಕಾರ್ಯಕಾರಿ ಸಮಿತಿಗೆ ಚುನಾವಣೆ ಸಂಘದ ಆವರಣದಲ್ಲಿ ನಡೆಯಲಿದೆ. ಈ ಎರಡು ವರ್ಷಗಳಲ್ಲಿ ಕಾರ್ಯಕಾರಿ ಸಮಿತಿಯು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಇತಿಹಾಸದಲ್ಲಿ ಇರುವಂತಹ ಕಾರ್ಯಕ್ರಮಗಳು ನಡೆದಿವೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ ಮತ್ತು ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಅಚ್ಚುಕಟ್ಟಾಗಿ ನಡೆಸಿದ್ದೇವೆ. ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ನಾಟಕ, ನೃತ್ಯ, ಸಂಗೀತ ತರಬೇತಿಗಳನ್ನು ಪರಿಣಿತರಿಂದ ಕೊಡಿಸಿ ಕಾರ್ಯಕ್ರಮಗಳನ್ನು ನೆರವೇರಿಸಲಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕರ್ನಾಟಕ ಸರ್ಕಾರದಿಂದ ಕ್ರಿಯಾಯೋಜನೆಯಡಿ ಕೊಡಮಾಡಿದ ವಾರ್ಷಿಕ 20ಲಕ್ಷ ರೂಪಾಯಿ ಧನಸಹಾಯವನ್ನು ಎರಡು ಬಾರಿ ಒಟ್ಟು ರೂಪಾಯಿ 40ಲಕ್ಷವನ್ನು ತರಲಾಗಿದೆ.

ಜೊತೆಗೆ ಕನ್ನಡಿಗರ ಮನೆಬಾಗಿಲಿಗೆ ಕಾರ್ಯಕ್ರಮಗಳು ಗುರ್‌ಗಾಂವ್, ಜೆ.ಎಸ್.ಎಸ್., ಜನಕಪುರಿ, ದೆಹಲಿ ಪೋಲಿಸ್ ಕನ್ನಡಿಗರ ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ಇದರ ಜೊತೆಗೆ ಬೆಂಗಳೂರು, ಮೈಸೂರಿನಲ್ಲೂ ನಾಟಕ ಪ್ರದರ್ಶನವನ್ನು ನೀಡಿದ್ದೇವೆ. ದೆಹಲಿ ಕರ್ನಾಟಕ ಸಂಘದ ಮುಂದಾಳತ್ವದಲ್ಲಿ ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ ಪ್ರಾರಂಭ ಆಗಿದೆ ಹಾಗೂ ಸಂಘದ ಪಕ್ಕದಲ್ಲಿ ಬರುತ್ತಿರುವ ಮೆಟ್ರೊ ನಿಲ್ದಾಣಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣ ಎಂದು ಹೆಸರಿಡುವಲ್ಲಿ ಯಶಸ್ವಿಯಾಗಿದೆ.

ಈ ಎಲ್ಲದರ ಜೊತೆಗೆ ಮುಂಬರುವ ದಿನಗಳಲ್ಲಿ ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ನಿಲಯವನ್ನು ಸಹ ಮಾಡುವ ಪ್ರಯತ್ನದಲ್ಲಿದ್ದೇವೆ.

ತಾವು ಆರಿಸಿದ ಕಾರ್ಯಕಾರಿ ಸಮಿತಿಯು ತನ್ನ ಕಾರ್ಯವನ್ನು ಪ್ರಮಾಣಿಕವಾಗಿ ಮಾಡಿ ತಮ್ಮ ವಿಶ್ವಾಸವನ್ನು ಉಳಿಸಿಕೊಂಡಿದೆ ಎಂದುಕೊಳ್ಳುತ್ತೇವೆ. ಸಂಘದ ಆರ್ಥಿಕ ಪರಿಸ್ಥಿತಿಯು ಬಹುಮಟ್ಟಿಗೆ ಉತ್ತಮವಾಗಿದೆ. ಮುಂಬರುವ ದಿನಗಳಲ್ಲಿ ಸಂಘದ ಹೆಚ್ಚುವರಿ ಕೆಲಸಗಳಿಗೆ 2.5ಕೋಟಿ ರೂ.ಗಳ ವಿಶೇಷ ಅನುದಾನಕ್ಕಾಗಿ ಮನವಿ ಕೊಟ್ಟಿದ್ದು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದು ಮುಂಬರುವ ದಿನಗಳಲ್ಲಿ ಹೆಚ್ಚಿನ ಕೆಲಸವಾಗಬೇಕಾಗಿದೆ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***


**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ



# ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಈ ಬಾರಿ ದೆಹಲಿ ಕರ್ನಾಟಕ ಸಂಘದಲ್ಲಿ 69ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಹಿರಿಯ ಸದಸ್ಯರಾದ ಶ್ರೀ ಭೀಮರಾವ್ ಮುರಗೋಡ, ಶ್ರೀ ಎನ್.ಎ. ಮಾಧವ, ಶ್ರೀ ಪುರುಷೋತ್ತಮ ಅವರು ಧ್ವಜಾರೋಹಣವನ್ನು ಮಾಡಿದರು. ರಾಷ್ಟ್ರಗೀತೆ ಹಾಡುವುದರೊಂದಿಗೆ ವಂದನೆ ಸಲ್ಲಿಸಲಾಯಿತು. ಈ ಬಾರಿಯ ವಿಶೇಷತೆ ಎಂದರೆ "ಸಮರ್ಥನಂ ಟ್ರಸ್ಟ್" ಬೆಂಗಳೂರಿನ ವಿಕಲಚೇತನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಎಸ್.ಸಿ. ಹೇಮಲತ, ಸದಸ್ಯರುಗಳಾದ ಶ್ರೀ ರಾಧಾಕೃಷ್ಣ, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ಆನಂದ ಈಶ್ವರಪ್ಪ ಮುರಗೊಡ ಶ್ರೀಮತಿ ಪೂಜಾ ರಾವ್, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ಸುಧೀರ್ ಫಡ್ನೀಸ್, ಷರೀಫ್ ಯು.ಎ., ಕೆ.ಎಸ್.ಜಿ. ಶೆಟ್ಟಿ, ಶ್ರೀ ಚೆನ್ನು ಎಸ್. ಮಠದ, ಶ್ರೀಮತಿ ಜಮುನಾ ಸಿ. ಮಠದ ಮೊದಲಾದ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಹೇಮಲತಾ ಅವರು ನಿರ್ವಹಿಸಿದರು. ಅ

*ಎಸ್.ಸಿ. ಹೇಮಲತ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**02 ಅಕ್ಟೋಬರ್ 2015** ಶುಕ್ರವಾರ ಮಧ್ಯಾಹ್ನ : 3.00 ಗಂಟೆಗೆ

**2014–15 ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ**

**04 ಅಕ್ಟೋಬರ್ 2015** ಭಾನುವಾರ ಬೆಳಿಗ್ಗೆ : 8.00 ರಿಂದ ಸಂಜೆ 4.00 ರವರೆಗೆ

**ದೆಹಲಿ ಕರ್ನಾಟಕ ಸಂಘದ 2015–17 ಸಾಲಿನ ಕಾರ್ಯಕಾರಿ ಸಮಿತಿಗೆ ಚುನಾವಣೆ**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಸೆಪ್ಟೆಂಬರ್, 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಸೆಪ್ಟೆಂಬರ್, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 27 ಸೆಪ್ಟೆಂಬರ್, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 27 ಸೆಪ್ಟೆಂಬರ್, 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 26104818**

## ಸಂಘ ಹಾಗೂ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ

# ಸಾಂಸ್ಕೃತಿಕ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವತಿಯಿಂದ ಬೆಂಗಳೂರಿನ ಸಮರ್ಥನಂ ಟ್ರಸ್ಟ್‌ನ ವಿಕಲಚೇತನ ಕಲಾವಿದರಿಂದ ಜಾನಪದ ಸಮೂಹ ನೃತ್ಯ ಹಾಗೂ ಕನ್ನಡ ಚಲನಚಿತ್ರಗೀತೆಗಳ ಹಾಗೂ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಆಗಸ್ಟ್ 16ರಂದು ಹಮ್ಮಿಕೊಳ್ಳಲಾಗಿತ್ತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಮ್ಮ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ನ್ಯಾಯವಾದಿ ಶ್ರೀ ಎ.ಎಸ್. ಜಯಚಂದ್ರ ಅವರು ಸಭೆಯನ್ನು ಉದ್ದೇಶಿಸಿ ದೆಹಲಿ ಪೋಲಿಸ್ ಕನ್ನಡಿಗರ ಜೊತೆ ತಮ್ಮ ಒಡನಾಟದ ಬಗ್ಗೆ ಮಾತನಾಡಿದರು. ನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಡಾ. ಕೆಂಪೇಗೌಡ ಅವರು ಅನಿರೀಕ್ಷಿತವಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದಿದ್ದು ತಮ್ಮನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದ್ದಕ್ಕಾಗಿ ತುಂಬಾ ಸಂತೋಷ ವ್ಯಕ್ತಪಡಿಸಿದರು ಹಾಗೂ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಯಾವುದೇ ಕಾರ್ಯಕ್ರಮದ ಕರೆ ಬಂದರೂ ನಾನು ಬರುವುದಾಗಿ ಭರವಸೆ ನೀಡಿದರು. ದೆಹಲಿ ಕರ್ನಾಟಕ ಸಂಘದ ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ 'ಸರ್ ಎಂ.ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣ' ಎಂದು ನಾಮಕರಣಕ್ಕೆ ಮಾಡುವುದಕ್ಕೆ ದೆಹಲಿ ಕರ್ನಾಟಕ ಸಂಘದ ಪಾತ್ರ ತುಂಬಾ ಮುಖ್ಯವಾದದ್ದು ಎಂದು ತಿಳಿಸಿದರು.

ಆನಂತರ ಐ.ಪಿ.ಎಸ್. ಅಧಿಕಾರಿ ಶ್ರೀ ರಾಜಶೇಖರ್ ಅವರು ಮಾತನಾಡಿ ಸಮರ್ಥನಂ ಟ್ರಸ್ಟ್‌ನ ವಿಕಲಚೇತನ ಕಲಾವಿದರ ಬಗ್ಗೆ ಅವರ ಸಾಹಸಗಳ ಬಗ್ಗೆ ತುಂಬಾ ಹರ್ಷ ವ್ಯಕ್ತಪಡಿಸಿದರು. ಸಮರ್ಥನಂ ಟ್ರಸ್ಟ್‌ನ ಶ್ರೀ ಮಹಾಂತೇಶ್ ಅವರು ಮಾತನಾಡುತ್ತ ತಮ್ಮ ತಂಡ ದೇಶ ವಿದೇಶಗಳಲ್ಲಿ ಪ್ರದರ್ಶನ ನೀಡಿದ್ದು ಪ್ರಥಮ ಬಾರಿಗೆ ದೆಹಲಿಯಲ್ಲಿ ಅದೂ ದೆಹಲಿ ಕರ್ನಾಟಕ ಸಂಘದಲ್ಲಿ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಜೊತೆ ಪ್ರದರ್ಶನ ನೀಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಚಿರಋಣಿಯಾಗುತ್ತೇವೆ ಎಂದು ತಿಳಿಸಿ ಮತ್ತು ದೆಹಲಿ ಕನ್ನಡಿಗರು ಬೆಂಗಳೂರಿಗೆ ಬಂದಾಗ ಸಮರ್ಥನಂ ಟ್ರಸ್ಟ್‌ಗೆ ಒಂದು ಬಾರಿ ಭೇಟಿ ಮಾಡಲು ವಿನಂತಿಸಿಕೊಂಡರು. ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳನ್ನು ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಶ್ರೀ ರಾಜಕುಮಾರ ಅವರು ಸ್ವಾಗತಿಸಿದರು. ಉಪಾಧ್ಯಕ್ಷರಾದ ಶ್ರೀ ಆರ್.ಟಿ. ನಾರಾಯಣ, ಸದಸ್ಯರಾದ ಶ್ರೀ ಆರ್.ಎ. ವೆಂಕಟೇಶ್, ಶ್ರೀ ರಂಗನಾಥ್, ಶ್ರೀ ಜಯರಾಮ್ ಹಾಗೂ ಶ್ರೀ ಪುರುಷೋತ್ತಮ ಅವರು ಅತಿಥಿಗಳಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು. ದೆಹಲಿ ಪೋಲಿಸ್ ಕನ್ನಡಿಗರ ಪೋಲಿಸ್ ಕಲ್ಯಾಣ ಸಮಿತಿಯ ಕೋಶಾಧ್ಯಕ್ಷರಾದ ಶ್ರೀ ಆರ್. ಮಹದೇವ್ ಅವರು ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರೂಪಿಸಿದರು, ಕಾರ್ಯದರ್ಶಿ ಗಿರೀಶ್ ಅವರು ವಂದನಾರ್ಪಣೆ ಸಲ್ಲಿಸಿದರು.

ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯ ಸದಸ್ಯರಾದ ಶ್ರೀ ಎ.ಟಿ. ಶ್ರೀನಿವಾಸ್, ಶ್ರೀಮತಿ ಆಶಾ ಮಹದೇವ್, ಶ್ರೀಮತಿ ಮಂಜುಳಾ ನಾಗರಾಜ್, ಶ್ರೀಮತಿ ಶೋಭಾ ನಾಗರಾಜ್, ಶ್ರೀಮತಿ ಲೀಲಾ ದೇವರಾಜ್, ಶ್ರೀಮತಿ ಮಮತಾ ಶಿವರಾಂ, ಶ್ರೀಮತಿ ಲಕ್ಷ್ಮೀ ರಾಜ್‌ಕುಮಾರ್ ಹಾಗೂ ಶ್ರೀಮತಿ ಜಯಾಶ್ರೀನಿವಾಸ್ ಅವರ ನಾಡಗೀತೆಯೊಂದಿಗೆ ಸಭಾ ಕಾರ್ಯಕ್ರಮ ಪ್ರಾರಂಭಗೊಂಡಿತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮೊದಲಿಗೆ ಸಮರ್ಥನಂ ವಿಕಲಚೇತನ ಕಲಾವಿದರಿಂದ ಗಣೇಶ ಸ್ತುತಿಯೊಂದಿಗೆ ಆರಂಭವಾಯಿತು. ಸ್ಥಳೀಯ ಕಲಾವಿದರಾದ ಶ್ರೀವಿದ್ಯಾ ಪುರುಷೋತ್ತಮ್, ಲಿಖಿತ್ ಮಹದೇವ್, ಭುವನ್ ಮಹದೇವ್, ಲಕ್ಷ್ಯ ನಾಗರಾಜ್, ಸ್ವಾತಿ ಎ.ಟಿ. ಶ್ರೀನಿವಾಸ್, ಮಧುವಿಜಯ್ ಕುಮಾರ್, ಗೀತಾ ರಾಜಕುಮಾರ್, ಸುಚಿತ ಶ್ರೀನಿವಾಸ್ ತಮ್ಮ ನೃತ್ಯ ಪ್ರದರ್ಶನ ನೀಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ಕಾರ್ಯಕ್ರಮದಲ್ಲಿ ಶ್ರೀ ಎ.ಟಿ. ಶ್ರೀನಿವಾಸ್‌ರವರು ತಮ್ಮದೇ ಆದ ಶೈಲಿಯಲ್ಲಿ ನೃತ್ಯ ಪ್ರದರ್ಶನದಿಂದ ಪ್ರೇಕ್ಷಕರೆಲ್ಲರನ್ನು ನಗೆಗಡಲಲ್ಲಿ ತೇಲಾಡಿಸಿದರು.

ಈ ಕಾರ್ಯಕ್ರಮದ ಸಂದರ್ಭದಲ್ಲಿ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಸದಸ್ಯೆ ಶ್ರೀಮತಿ ಆಶಾಲತಾ ಎಂ ಅವರು ಆರು ವರ್ಷಗಳ ಹಿಂದಿನ ಅನುಭವವನ್ನು ಹಂಚಿಕೊಂಡರು. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಪ್ರಥಮ ಬಾರಿಗೆ ಭಾಗವಹಿಸುವಾಗ ಎರಡು ಹೆಸರು ನೋಂದಾಯಿಸಿದಾಗ ಅಂದಿನ ಸಮಿತಿಯ ಸದಸ್ಯರಲ್ಲೊಬ್ಬರು ಕಾರ್ಯಕ್ರಮದ ಗುಣಮಟ್ಟ ಮುಖ್ಯವಾದ ಕಾರಣ ಒಂದೇ ಕಾರ್ಯಕ್ರಮವಾದರೂ ಕಾರ್ಯಕ್ರಮ ಚೆನ್ನಾಗಿರಬೇಕು ಎಂದು ಹೇಳಿದರು. ಇದನ್ನು ಸವಾಲಾಗಿ ಸ್ವೀಕರಿಸಿದ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ಸದಸ್ಯರು ಅಂದಿನಿಂದ ಇಂದಿನವರೆಗೂ ನಾಟಕವಾಗಲಿ, ಸಮೂಹ ನೃತ್ಯವಾಗಲಿ, ಗಾಯನವಾಗಲಿ ಎಲ್ಲದರಲ್ಲೂ ಅಪೇಕ್ಷಿಸಿದ ಗುಣಮಟ್ಟಕ್ಕಿಂತ ಒಳ್ಳೆಯ ಕಾರ್ಯಕ್ರಮವನ್ನು ನೀಡುತ್ತಾ ಪ್ರೇಕ್ಷಕರ ಮನಸ್ಸಿನಲ್ಲಿ ಮನೆಮಾಡಿದ್ದೇವೆ ಎಂದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮುಖ್ಯ ಅತಿಥಿಗಳಿಗೆ ಸಂಘದ ಸ್ಮರಣಿಕೆಯನ್ನು ನೀಡಿ ಗೌರವಿಸಿದರು. ಅವರು ಸಮರ್ಥನಂ ಟ್ರಸ್ಟ್‌ನ ಕಲಾವಿದರಿಗೆ ಹೂಗುಚ್ಛ ನೀಡಿ ಪ್ರಶಂಸೆಯ ಮಾತುಗಳನ್ನಾಡಿದರು. ಅ

*ಗಿರೀಶ್ ಎಸ್.*





















# ಸ್ವಾತಂತ್ರ್ಯ ದಿನದಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸ್ಮರಣೆ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಬಳಗದ ವತಿಯಿಂದ ಸಂಗೊಳ್ಳಿ ರಾಯಣ್ಣನವರ ಕುರಿತು ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಂಗೊಳ್ಳಿ ರಾಯಣ್ಣನವರ ಜನ್ಮದಿನವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಆಗಸ್ಟ್ 15ರಂದು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನೀತಿ ಆಯೋಗದ ನಿರ್ದೇಶಕರಾದ ಶ್ರೀ ಎಸ್.ಕೆ. ಮುನಿರಾಜು ಅವರು ವಹಿಸಿದ್ದರು. ಅವರು ಕನಕ ಫೌಂಡೇಶನ್‌ನಿಂದ ಸಂಗೊಳ್ಳಿ ರಾಯಣ್ಣನ ಬಗ್ಗೆ ಸಂಶೋಧನೆ ಹಾಗೂ ಅವರ ಬಗ್ಗೆ ರಚಿಸಿದ ಲಾವಣಿಗಳ ಸಂಗ್ರಹ ಕಾರ್ಯ ಕೂಡ ನಡೆದಿದೆ ಎಂದು ಹೇಳಿದರು. ಅಲ್ಲದೆ ಒಬ್ಬ ಪ್ರಾಧ್ಯಾಪಕರು ಸಂಗೊಳ್ಳಿ ರಾಯಣ್ಣನ ಬಗ್ಗೆ ಪಿ.ಎಚ್.ಡಿ. ಕೂಡಾ ಮಾಡಿದ್ದಾರೆ ಎಂದು ತಿಳಿಸಿದರು. ಇದಲ್ಲದೆ ಇನ್ನೂ ಹೆಚ್ಚಿನ ಕಾರ್ಯಗಳು ಆಗಬೇಕಿದೆ ಆ ನಿಟ್ಟಿನಲ್ಲಿ ಕಾರ್ಯ ಪ್ರಾರಂಭವಾಗಿದೆ ಎಂದು ತಿಳಿಸಿದರು.

ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ಅಧ್ಯಕ್ಷರಾದ ಶ್ರೀ ವೈಜನಾಥ್ ಅವರು ತಮ್ಮ ವಿಚಾರ ಪ್ರಕಟಿಸುತ್ತಾ ದೆಹಲಿ ಕರ್ನಾಟಕ ಸಂಘ ಹಾಗೂ ಸೇರಿದ ಸಭಿಕರಿಗೆ ಅಭಿನಂದನೆಗಳನ್ನು ತಿಳಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಈಗಾಗಲೇ ಸಂಗೊಳ್ಳಿ ರಾಯಣ್ಣ ಸಿನೇಮಾ ಬಂದಾಗಿದೆ. ಇಂತಹ ಸಿನೇಮಾಗಳ ತಯಾರಿ ಹಂತದಲ್ಲಿ ಸಾಕಷ್ಟು ಸಂಶೋಧನೆಗಳು ಆಗಿರಲಿಕ್ಕೆ ಸಾಕು. ಹೋದ ವರ್ಷ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮ ಈ ಸಲ ಇಷ್ಟೊಂದು ಜನರನ್ನೊಳಗೊಂಡು ಒಂದು ಉತ್ತಮ ಕಾರ್ಯಕ್ರಮವಾಗಿ ಮೂಡಿಬರುತ್ತಿರುವುದು ನಿಜಕ್ಕೂ ನನಗೆ ಸಂತಸ ತಂದಿದೆ ಎಂದರು.

ಜಾನಪದ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ಸಂಗೊಳ್ಳಿ ರಾಯಣ್ಣ ಅವರು ಕಿತ್ತೂರು ರಾಣಿ ಚೆನ್ನಮ್ಮನವರೊಂದಿಗೆ ಬ್ರಿಟೀಷ್ ನೀತಿಗಳು ಹಾಗೂ ಆಡಳಿತದ ವಿರುದ್ಧ ಹೋರಾಡಿದರು. ರಾಯಣ್ಣನ ಬಗ್ಗೆ ಇಂದು ಇತಿಹಾಸದಲ್ಲಿ ದೊರೆಯುವ ಮಾಹಿತಿಗಳು ಕೇವಲ ಅಂದಿನ ಆಡಳಿತ ವರ್ಗ ಬರೆದಿರುವ ಮಾಹಿತಿಗಳು ಮಾತ್ರ ಲಭ್ಯವಿದೆ. ಆದ ಕಾರಣ ಸಂಗೊಳ್ಳಿ ರಾಯಣ್ಣನವರು ಇದ್ದ ಊರಿನಲ್ಲಿ ಹೋಗಿ ಸಂಶೋಧನೆ ಮಾಡಬೇಕು. ಸಂಗೊಳ್ಳಿ ರಾಯಣ್ಣ ಜನರ ನಡುವೆ ಇದ್ದವರಾದ್ದರಿಂದ ಅಲ್ಲಿನ ಜನರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹ ಮಾಡಬೇಕಾಗಿದೆ ಎಂದರು. ಇದನ್ನು ಸಮರ್ಥಿಸುತ್ತಾ ಮಾತನಾಡಿದ ಡಾ. ವೆಂಕಟಾಚಲ ಹೆಗಡೆಯವರು ನಮ್ಮ ಮುಂದಿನ ಪೀಳಿಗೆ ಅವರನ್ನು ಪರಿಚಯ ಮಾಡಿಕೊಡುವ ಮಹತ್ಕಾರ್ಯ ಇಂದಿನ ಪೋಷಕರ ಮೇಲಿದೆ ಎಂದರು.

ವಿಚಾರ ಮಂಡಿಸಿದ ಡಾ. ವಿ.ಆರ್. ಗುಡ್ಡೇಗೌಡ ಅವರು ಮಾತನಾಡುತ್ತಾ ಸಂಗೊಳ್ಳಿ ರಾಯಣ್ಣನವರ 'ಸ್ವಾಮಿ ನಿಷ್ಠೆ'ಯ ಬಗ್ಗೆ ಮಾಹಿತಿ ಕೊಟ್ಟರು. ಡಾ. ಅವನೀಂದ್ರನಾಥ್ ರಾವ್ ಅವರು ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನೋತ್ಸವದಂದು ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸುತ್ತಿರುವುದು ಬಹುಶಃ ಈ ಹೊಸ ಕಟ್ಟಡ ಪ್ರಾರಂಭವಾದಗಿನಿಂದ ಇದೇ ಪ್ರಥಮ ಬಾರಿ ಹಾಗೂ ಇದು ಔಚಿತ್ಯಪೂರ್ಣ ಎಂದು ಹೇಳುತ್ತಾ ಸಂಗೊಳ್ಳಿ ರಾಯಣ್ಣನವರು ಒಬ್ಬ ಶ್ರೇಷ್ಠ ನಾಯಕ ಹಾಗೂ ಸಂಘಟಕನಾಗಿ ಬಂದು ಕ್ರಾಂತಿಯನ್ನೇ ಎಬ್ಬಿಸಿದವರು ಎಂದರು. ಅವರನ್ನು ಗಲ್ಲಿಗೇರಿಸುವಾಗ ಅವರ ಕೊನೆ ಆಸೆ ಏನೆಂಬುದನ್ನು ಕೇಳಿದಾಗ ಇನ್ನೊಮ್ಮೆ ಭಾರತದಲ್ಲಿ ಹುಟ್ಟಿ ಭಾರತಕ್ಕೆ ಸ್ವಾತಂತ್ರ್ಯ ತರಲು ಹೋರಾಡುವೆ ಎಂದರು. ಶ್ರೀ ಸಖಾರಾಮ ಉಪ್ಪೂರು ಅವರು ಸಂಗೊಳ್ಳಿ ರಾಯಣ್ಣನ ಬಗ್ಗೆ ಮಾತನಾಡುತ್ತಾ ಸಂಗೊಳ್ಳಿರಾಯಣ್ಣನವರು ಕರ್ನಾಟಕ ಕೊಟ್ಟ ಮಹಾಪುರುಷರಲ್ಲಿ ಒಬ್ಬರು ಎಂದರು.

ಕಾರ್ಯಕ್ರಮವು ರಾಷ್ಟ್ರಗೀತೆ ಹಾಗೂ ಜ್ಯೋತಿ ಬೆಳಗುವುದರ ಮೂಲಕ ಪ್ರಾರಂಭವಾಯಿತು. ಈ ಕಾರ್ಯಕ್ರಮದಲ್ಲಿ ವಿಚಾರ ಮಂಡನೆಗಳ ಮಧ್ಯೆ ಮಧ್ಯೆ ದೇಶ ಭಕ್ತಿಗೀತೆಗಳನ್ನು ಶ್ರೀ ಚಿದಂಬರ ಕೋಟೆ, ಶ್ರೀಮತಿ ನೇತ್ರಾವತಿ, ಶ್ರೀಮತಿ ಹೇಮಲತಾ ಗುಡ್ಡೇಗೌಡ, ಶ್ರೀ ಎ.ಟಿ. ಶ್ರೀನಿವಾಸ, ಶ್ರೀ ಕುಮಾರ್, ಶ್ರೀಮತಿ ಮಂಜುಳಾ ನಾಗರಾಜ್, ಕು. ಪ್ರೇರಣಾ ರಾವ್, ಕು. ಭಾಗ್ಯಶ್ರೀ ಅವರು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗನ್ನು ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗವು ತಂದಿತು. ಕಾರ್ಯಕ್ರಮವನ್ನು ಶ್ರೀಮತಿ ಆಶಾಲತಾ ಮಹದೇವ ಅವರು ನಿರೂಪಿಸಿದರು ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ಕಾರ್ಯದರ್ಶಿಗಳಾದ ಶ್ರೀ ಮಹದೇವ ಅವರು ವಂದನಾರ್ಪಣೆ ಸಲ್ಲಿಸಿದರು. ಅ

***ಆಶಾಲತಾ ಮಹದೇವ***





# ದೆಹಲಿ ಕನ್ನಡ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 69ನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ ಅವರು ಧ್ವಜಾರೋಹಣ ನೆರವೇರಿಸಿ ಮಾತಾಡುತ್ತಾ "ದೇಶವು ಅಭಿವೃದ್ಧಿಯ ಪಥದಲ್ಲಿ ಸಾಗುವಲ್ಲಿ ಯುವಜನರ ಪಾತ್ರ ಅಗತ್ಯ. ರಾಷ್ಟ್ರೀಯ ಹಬ್ಬಗಳು ಕೇವಲ ಆಚರಣೆಗೆ ಸೀಮಿತವಾಗದೇ ದೇಶಸೇವೆಗೆ ಮುಂದಾಗುವ ಮನೋಸ್ಥಿತಿಯನ್ನು ನಮ್ಮಲ್ಲಿ ಮೂಡಿಸುವಂತಿರಬೇಕು" ಎಂದರು. ನೆರೆದವರೆಲ್ಲರೂ ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಾಥಮಿಕ ವಿಭಾಗದ ಮಕ್ಕಳಿಂದ ವರ್ಣರಂಜಿತ ಕಾರ್ಯಕ್ರಮಗಳು, ಎನ್.ಸಿ.ಸಿ ಅವರ ಆಕರ್ಷಕ ಪಥಸಂಚಲನ, ಭಾಷಣ, ಸ್ವಾತಂತ್ರ್ಯ ಹೋರಾಟಗಾರರ ಕುರಿತಾದ ಪಾತ್ರಾಭಿನಯ, ಶಿಕ್ಷಕರ ಹಾಗೂ ವಿದ್ಯಾರ್ಥಿಗಳ 'ಭಾರತ ದೇಶವಿದು ಭಾರತ, ಭಗವಂತ ನೆಲೆಸಿದ ಪುಣ್ಯ ಭೂಮಿ ಭಾರತ' ಸಮೂಹಗೀತೆಯು ವಿಶಿಷ್ಟ ರೂಪದಲ್ಲಿ ಮೂಡಿ ಬಂತು.

ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು, ಪೋಷಕರನ್ನು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರನ್ನು ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಸ್ವಾಗತಿಸಿದರು. ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ, ಕಾರ್ಯದರ್ಶಿ ಶ್ರೀ ಸಿ.ಆರ್. ಶ್ರೀನಿವಾಸ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಕಾಶೀನಾಥ್ ಬಿರಾದರ್, ಶ್ರೀ ಎಸ್. ಡಿ. ಶ್ರೀನಿವಾಸ್, ಶ್ರೀ ಹನುಮೇ ಗೌಡ ಉಪಸ್ಥಿತರಿದ್ದರು. ಅ

*ಅರವಿಂದ ಬಿಜ್ಜೆ*

# ಕಣ್ತುಂಬಿದ ಗಾನ ನೃತ್ಯ ವೈಭವ

'ಸಮರ್ಥನಂ ಅಂಗವಿಕಲರ ಸಂಸ್ಥೆ' ಬೆಂಗಳೂರು ಇದರ ವತಿಯಿಂದ ವಿಶೇಷ ಪ್ರತಿಭೆಗಳ 'ಗಾನ–ನೃತ್ಯ ವೈಭವ' ಕಾರ್ಯಕ್ರಮವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಆವರಣದಲ್ಲಿ ಇದೇ ಆಗಸ್ಟ್ 18ರಂದು ಆಯೋಜಿಸಲಾಗಿತ್ತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ "ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದಲ್ಲ ಒಂದು ಪ್ರತಿಭೆಯಿದೆ. ದೈಹಿಕ ನ್ಯೂನತೆಗಳು ವ್ಯಕ್ತಿಯ ಸಾಧನೆಗೆ, ಪ್ರತಿಭೆಗಳಿಗೆ ಎಂದಿಗೂ ಅಡ್ಡಿಯಾಗಲಾರವು" ಎಂದು ನುಡಿದು ಎಲ್ಲಾ ಕಲಾವಿದರಿಗೆ ಶುಭ ಹಾರೈಸಿ ಬಳಿಕ, 'ಸಮರ್ಥನಂ ಅಂಗವಿಕಲರ ಸಂಸ್ಥೆ'ಯ ಟ್ರಸ್ಟಿಗಳಾದ ವಾಸಂತಿ ಸವಣೂರು ಅವರಿಗೆ ಸಂಸ್ಥೆಯ ವತಿಯಿಂದ ರೂಪಾಯಿ 10,000/– ಗೌರವಧನವನ್ನು ನೀಡಿ ಗೌರವಿಸಲಾಯಿತು.

ಹೆಮ್ಮೆಯ ಕನ್ನಡ ನಾಡಿನಿಂದ ಕಾರ್ಯಕ್ರಮ ನೀಡಲು ಆಗಮಿಸಿದಂತಹ ಎಲ್ಲಾ ಕಲಾವಿದರನ್ನು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರನ್ನು ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಸ್ವಾಗತಿಸುತ್ತಾ ಸಂಸ್ಥೆಯು ಕನ್ನಡಿಗರ ಪ್ರತಿಭೆಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬರುತ್ತಿದೆ. ಇಂತಹ ಅಪರೂಪವಾದ ಕಾರ್ಯಕ್ರಮವನ್ನು ಸಂಸ್ಥೆಯಲ್ಲಿ ಪ್ರದರ್ಶಿಸಿದ ಸಮರ್ಥನಂ ಟ್ರಸ್ಟ್ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು.

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಕಾಶೀನಾಥ್ ಬಿರಾದರ್, ಶ್ರೀ ಎಸ್.ಡಿ. ಶ್ರೀನಿವಾಸ್ ಈ ಯಶಸ್ವಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಕಾರ್ಯಕ್ರಮವನ್ನು ಜ್ಯೋತಿ ಅವರು ನಿರೂಪಿಸಿದರು.

ವಿಶೇಷ ಪ್ರತಿಭೆಗಳಾದ ಬಾಲಸುಬ್ರಹ್ಮಣ್ಯಮ್ ಹಾಗೂ ಭಾಗ್ಯಮ್ಮ ಅವರ ಸುಶ್ರಾವ್ಯ ಹಾಡುಗಳು ಹಾಗೂ ಲಿಂಗರಾಜು, ಸುಮ, ಮಾನಸ, ಸುಮ ಎಸ್., ಶ್ರೀದೇವಿ, ಜಯಶ್ರೀ, ಉಷಾ ಅವರ ತಂಡದ ನೃತ್ಯವು ಮನ ತಣಿಯುವಂತಿತ್ತು. ತಬಲದಲ್ಲಿ ಮಂಜುನಾಥ, ರಿದಂ ಪ್ಯಾಡ್‌ನಲ್ಲಿ ಅಶೋಕ ಮತ್ತು ಕೀ ಬೋರ್ಡ್‌ನಲ್ಲಿ ಜಾನ್ ಅವರ ಕೈ ಚಳಕ ಅಚ್ಚರಿ ಮೂಡಿಸುವಂತಿತ್ತು. 15 ಸದಸ್ಯರ ತಂಡದ 'ಸಮರ್ಥನಂ ಅಂಗವಿಕಲರ ಸಂಸ್ಥೆ'ಯ ಈ ವೈವಿಧ್ಯಮಯ ಕಾರ್ಯಕ್ರಮವು ನೆರೆದ ಎಲ್ಲಾ ವಿದ್ಯಾರ್ಥಿಗಳ, ಶಿಕ್ಷಕರ ಮನವನ್ನು ಹುಚ್ಚೆದ್ದು ಕುಣಿಯುವಂತೆ ರಂಜಿಸಿದವು.

ಸಮಾಜದ ಅವಕಾಶ, ಸೌಕರ್ಯಗಳಿಂದ ವಂಚಿತರಾದ ಅಶಕ್ತರಿಗೆ ಆಸರೆಯಾಗಲೆಂದು ಮಹಾಂತೇಶ್ ಜಿ. ಕೆ., ವಾಸಂತಿ ಸವಣೂರು, ಎಸ್.ಪಿ. ನಾಗೇಶ್, ಉದಯಕುಮಾರ್ ಅವರು ಪಟ್ಟ ಪರಿಶ್ರಮದ ಫಲವಾಗಿ 1997 ಫೆಬ್ರವರಿ 26ರಂದು 'ಸಮರ್ಥನಂ ಅಂಗವಿಕಲರ ಸಂಸ್ಥೆ' ಉದಯವಾಯಿತು. ಅದೆಷ್ಟೋ ಅಶಕ್ತರ ಬಾಳಿಗೆ ಹೊಸ ಕಿರಣವಾಯಿತು. ಶಿಕ್ಷಣ, ಕ್ರೀಡೆ, ಪರಿಸರ, ಸಂಸ್ಕೃತಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೆಂಗಳೂರಿನ ಈ 'ಸಮರ್ಥನಂ ಅಂಗವಿಕಲರ ಸಂಸ್ಥೆ'ಗೆ ಕೋಟಿ ನಮನಗಳು. ಅ

*ಅರವಿಂದ ಬಿಜ್ಜೆ*

# ಮನ ಸೆಳೆದ- ವಿಜ್ಞಾನ ಮಾದರಿ ಪ್ರದರ್ಶನ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 'ವಿಜ್ಞಾನ ಮಾದರಿ ಪ್ರದರ್ಶನ' ಕಾರ್ಯಕ್ರಮವನ್ನು ಇದೇ ಆಗಸ್ಟ್ 22ರಂದು ಆಯೋಜಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ ಅವರು 'ವಿಜ್ಞಾನ ಮಾದರಿ ಪ್ರದರ್ಶನ'ದ ಕುರಿತು ಉದ್ದೇಶಿಸಿ–"ಇಂದು ನಮ್ಮ ಜಗತ್ತಿನ ನಡಿಗೆಗೆ ವಿಜ್ಞಾನವು ಹೊಸ ಆಯಾಮ ಹಾಗೂ ವೇಗ ನೀಡಿದೆ. ಪ್ರಗತಿಯ ಹಾದಿಯಲ್ಲಿ ವಿಜ್ಞಾನದ ಪಾತ್ರ ಮಹತ್ತರವಾದುದು. ನಮ್ಮ ಶಾಲೆಗಳೇ ವಿಜ್ಞಾನದ ಮೊದಲ ಪ್ರಯೋಗ ಶಾಲೆಗಳು, ಮಕ್ಕಳೇ ವಿಜ್ಞಾನಿಗಳು" ಎಂದರು.

"ಹೃದಯದಲ್ಲಿ ದೇವರು, ಮೆದುಳಿನಲ್ಲಿ ವಿಜ್ಞಾನ ಇರಬೇಕು" ಇದು ಪ್ರಸಿದ್ಧ ಲೇಖಕ ಚೇತನ್ ಭಗತ್ ಅವರ ಮಾತು. ಹೌದು, ಮೆದುಳಿನಲ್ಲಿ ವಿಜ್ಞಾನ ಎಳವೆಯಲ್ಲಿಯೇ ಇರಬೇಕು. ಇಂತಹ ಎಳವೆಯಲ್ಲಿರುವ ವಿಜ್ಞಾನವು ಪ್ರದರ್ಶಿತವಾದುದು ದೆಹಲಿ ಕನ್ನಡ ಸಂಸ್ಥೆಯಲ್ಲಿ. ವಿಜ್ಞಾನದ ವಿವಿಧ ವಿಶಿಷ್ಟ ರೂಪದ ಮಾದರಿಗಳು 10–15 ದಿನಗಳ ವಿದ್ಯಾರ್ಥಿಗಳ ಪರಿಶ್ರಮಕ್ಕೆ ಸಾರ್ಥಕತೆಯನ್ನು ಒದಗಿಸಿತು. ಅದಲ್ಲದೆ ಚಿತ್ರಕಲೆ ಹಾಗೂ ಕರಕುಶಲ ಕಲೆ, ಸಮಾಜ ವಿಜ್ಞಾನ, ಗಣಿತ ಶಾಸ್ತ್ರ, ಅರ್ಥಶಾಸ್ತ್ರ ಮತ್ತು ವಾಣಿಜ್ಯ ಶಾಸ್ತ್ರದ ವಿವಿಧ ಆಕರ್ಷಕ ಪ್ರಯೋಗಾತ್ಮಕ ಮಾದರಿಗಳು ಎಲ್ಲರ ಪ್ರಶಂಸೆಗೆ ಕಾರಣವಾಯಿತು.

ಕಾರ್ಯಕ್ರಮಕ್ಕೆ ನೀತಿ ಆಯೋಗ, ಭಾರತ ಸರಕಾರ ಇದರ ಹಿರಿಯ ಸಂಶೋಧನಾ ಅಧಿಕಾರಿಗಳು ಹಾಗೂ ಕನ್ನಡಿಗರಾದ ಡಾ. ಮುನಿರಾಜು ಎಸ್. ಬಿ. ಮತ್ತು ಡಾ. ತ್ಯಾಗರಾಜು ಬಿ.ಎನ್. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಹೆಚ್ಚಿನ ಸಮಯವನ್ನು ಮಕ್ಕಳೊಂದಿಗೆ ಕಳೆದ ಅತಿಥಿಗಳು ಮಾದರಿಗಳ ಬಗ್ಗೆ ವಿವರ ತಿಳಿದು ವಿದ್ಯಾರ್ಥಿಗಳಿಗೆ ಇನ್ನಷ್ಟು ಉತ್ತೇಜಕ ಮಾಹಿತಿಯನ್ನು ನೀಡಿದರು. ಅತಿಥಿಗಳನ್ನು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರನ್ನು ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರು ಸ್ವಾಗತಿಸಿದರು. ಮಾತ್ರವಲ್ಲದೆ ಈ ಯಶಸ್ವಿ ಕಾರ್ಯಕ್ರಮದ ನೇತೃತ್ವವನ್ನು ಕೂಡಾ ವಹಿಸಿದ್ದರು ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಸ್. ಡಿ. ಶ್ರೀನಿವಾಸ್ ಉಪಸ್ಥಿತರಿದ್ದರು. ಅ

*ಅರವಿಂದ ಬಿಜ್ಜೆ*



# ಸಂಘದ ಸಾಂಸ್ಕೃತಿಕ ಸಮುಚ್ಛಯದ
# ದಶಮಾನೋತ್ಸವ ಸಮಾರೋಪ ಸಮಾರಂಭ

ದೆಹಲಿ ಕರ್ನಾಟಕ ಸಂಘ ಅಂದರೆ ಬರೀ ಸಂಘ ಅಲ್ಲ; ಅದೊಂದು ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾದ ಕೇಂದ್ರವಾಗಿದ್ದು ಕನ್ನಡಿಗರಿಗೆ, ಕಲಾವಿದರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದೆ. ಇಲ್ಲಿಗೆ ಬರುವಂಥ ಎಲ್ಲಾ ಕರ್ನಾಟಕದವರಿಗೆ ತಾವು ಅನಾಥರಲ್ಲ ಎಂಬ ಬೆಚ್ಚನೆಯ ಭಾವನೆಯನ್ನು ಕೊಡತಕ್ಕಂತಹ ಕೆಲಸವನ್ನು ಮಾಡುತ್ತಿದೆ ಎಂದು ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ನುಡಿದರು.

ಅವರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಇದೇ ಆಗಸ್ಟ್ 30ರಂದು ಸಂಘದ ಸಭಾಂಗಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಗೀತೋತ್ಸವ 2015ರಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತಾಡುತ್ತಿದ್ದರು. "ನೀವು ಬರೀ ಕನ್ನಡಿಗರಲ್ಲ, ವಿಶೇಷವಾದಂತಹ ಕನ್ನಡಿಗರು. ಕನ್ನಡಕ್ಕೋಸ್ಕರ ವಿಶಿಷ್ಟ ಕೆಲಸವನ್ನು ಮಾಡ್ತಾ ಇದ್ದೀರಿ, ಮುಂದೆಯೂ ಮಾಡುವಿರಿ ಎಂಬ ನಂಬಿಕೆ, ವಿಶ್ವಾಸವನ್ನು ನಾವು ಇಟ್ಟುಕೊಂಡಿದ್ದೇವೆ" ಎಂದರು.

> "ನೀವು ಬರೀ ಕನ್ನಡಿಗರಲ್ಲ, ವಿಶೇಷವಾದಂತಹ ಕನ್ನಡಿಗರು. ಕನ್ನಡಕ್ಕೋಸ್ಕರ ವಿಶಿಷ್ಟ ಕೆಲಸವನ್ನು ಮಾಡ್ತಾ ಇದ್ದೀರಿ, ಮುಂದೆಯೂ ಮಾಡುವಿರಿ ಎಂಬ ನಂಬಿಕೆ, ವಿಶ್ವಾಸವನ್ನು ನಾವು ಇಟ್ಟುಕೊಂಡಿದ್ದೇವೆ"

ಈ ಒಂದು ಸಮುಚ್ಚಯ ಅಥವಾ ಸಂಘ ಇರಬಹುದು ಸುಮಾರು ವರ್ಷಗಳಿಂದ ತನ್ನದೇ ಆದ ಹೋರಾಟವನ್ನು ಮಾಡುತ್ತಾ ಕನ್ನಡದ ಅಸ್ತಿತ್ವವನ್ನು ದೆಹಲಿಯಲ್ಲಿ ಸ್ಥಾಪನೆ ಮಾಡಲು ಶ್ರಮಪಟ್ಟಿದೆ. ಈ ಸಮುಚ್ಚಯದ ನಿರ್ಮಾಣದ ಸಂದರ್ಭದಲ್ಲಿ ಬಹಳಷ್ಟು ಅಧಿಕಾರಿಗಳು, ಪತ್ರಕರ್ತರು, ಹೋರಾಟಗಾರರು, ಕನ್ನಡ ಪ್ರೋತ್ಸಾಹಕರು, ಕನ್ನಡ ಅಭಿಮಾನಿಗಳು ಮತ್ತು ಸಹೃದಯಿಗಳು ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರನ್ನೆಲ್ಲಾ ನೆನಪು ಮಾಡಿಕೊಳ್ಳುವಂತಹ ಸಮಯವಿದು ಎಂದು ಶ್ರೀಮತಿ ಉಮಾಶ್ರೀ ಅವರು ಹೇಳಿದರು. ಕರ್ನಾಟಕದ ಮಾಜಿ ಮುಖ್ಯಮಂತ್ರಿಯಾಗಿ, ಕೇಂದ್ರ ಸಚಿವರಾಗಿದ್ದಂತಹ ಕೆ.ಸಿ. ರೆಡ್ಡಿಯವರ ಕಾಲದಲ್ಲಿ ಈ ಸಂಘಕ್ಕೆ ಭೂಮಿಯನ್ನು ಕೊಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಡಾ. ಸರೋಜಿನಿ ಮಹಿಷಿಯವರ ಕಾಲದಲ್ಲಿ ಅವರ ಮನೆಯಲ್ಲಿ ಅದೇ ರೀತಿಯ ಚಟುವಟಿಕೆಗಳು ನಡೆಯುತ್ತಾ ಇದ್ದವು. ಕನ್ನಡದ ಪರವಾಗಿ ಆ ತಾಯಿ ಕೊಟ್ಟಂತಹ ಬಹಳ ದೊಡ್ಡ ಕೊಡುಗೆ ಮತ್ತು ಪ್ರೋತ್ಸಾಹವನ್ನು ಇವತ್ತಿಗೂ ಸಹ ಜನ ನೆನಪಿಸಿಕೊಳ್ಳುತ್ತಾರೆ, ಎಂದ ಉಮಾಶ್ರೀ ತದ ನಂತರ ಬಂದ ಶ್ರೀ ಎಸ್.ಎಂ. ಕೃಷ್ಣ, ಶ್ರೀ ಧರಂ ಸಿಂಗ್, ಶ್ರೀ ಸಿದ್ದರಾಮಯ್ಯ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಅನಂತಕುಮಾರ್, ಶ್ರೀ ಪಿ.ಜಿ.ಆರ್. ಸಿಂಧ್ಯಾ ಮೊದಲದವರು ದೆಹಲಿಯಲ್ಲಿ ನಡೆಯುವ ಕನ್ನಡದ ಕೆಲಸಕ್ಕೆ ಕೈ ಜೋಡಿಸಿದ್ದಾರೆ ಎಂದರು. ದೆಹಲಿ ಕರ್ನಾಟಕ ಸಂಘವು ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಬರೀ ರಾಜ್ಯೋತ್ಸವ ಪ್ರಶಸ್ತಿ ಅಲ್ಲ, ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಈ ಸಂಸ್ಥೆ ಪಡೆಯಲಿ ಎಂದು ಅವರು ಈ ಸಂದರ್ಭದಲ್ಲಿ ಶುಭ ಹಾರೈಸಿದರು. ಸಂಘವು ಬೆಳೆಯಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು.

ತಾನು ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಸಚಿವೆಯಾದ ಸಂದರ್ಭದಲ್ಲಿ ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸರಕಾರದ ವತಿಯಿಂದ ಕನ್ನಡ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡಿರುವುದು ಒಂದು ಪುಟ್ಟ ಅಳಿಲು ಸೇವೆ ಎಂದು ವಿನಯಪೂರ್ವಕವಾಗಿ ನುಡಿದರು. ದೆಹಲಿ ಕರ್ನಾಟಕ ಸಂಘವು ಇಲ್ಲಿ ಇರುವುದರಿಂದ ತಾನು ತನಗೋಸ್ಕರ ಅಲ್ಲದೆ ತನ್ನ ಭಾಷೆಗೋಸ್ಕರ, ತನ್ನ ಅಸ್ತಿತ್ವಕ್ಕೋಸ್ಕರ, ನಿರಂತರವಾಗಿ ಕೆಲಸ ಮಾಡಿರುವುದು ಸಂತೋಷದ ಕೆಲಸವಾಗಿದೆ. ಪಕ್ಕದಲ್ಲಿರುವ ಮೆಟ್ರೋ ನಿಲ್ದಾಣಕ್ಕೆ ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಅವರ ಹೆಸರನ್ನು ಇಡಲಿಕ್ಕೆ ಹೋರಾಟವನ್ನು ಮಾಡಿ ಆ ಹೆಸರನ್ನು ಇಡುವಲ್ಲಿ ಮಾಡಿದ ಸಾಧನೆಗೆ ಕೂಡಾ ಅಭಿನಂದನೆಯನ್ನು ಸಲ್ಲಿಸಿದರು.

ಹಿರಿಯ ಗಾಯಕಿ ಡಾ. ಬಿ.ಕೆ. ಸುಮಿತ್ರ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ಮಾತಾಡುತ್ತಾ ನನಗೆ ದೆಹಲಿ ಕರ್ನಾಟಕ ಸಂಘ ಒಂದು ಮನೆ ತರ. ಬೆಂಗಳೂರು ನನ್ನ ಮೊದಲ ಮನೆ, ದೆಹಲಿ ನನ್ನ ಎರಡನೇ ಮನೆ. ಆದ್ದರಿಂದ ಇದು ಬೇರೆ ಊರು, ಬೇರೆ ಜನ ಎಂದು ಅನ್ನಿಸಲಿಲ್ಲ ಎಂದು ನುಡಿದರು.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷ ಹಾಗೂ ಸಂಘದ ಮಾಜಿ ಅಧ್ಯಕ್ಷರಾದ ಭಾರತದ ನಿವೃತ್ತ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ್ ರಾವ್ ಅವರು ಮಾತಾಡುತ್ತಾ ಈ ಕಟ್ಟಡವನ್ನು ನಿರ್ಮಿಸುವ ಸಂದರ್ಭದಲ್ಲಿ ಹಲವಾರು ಕಷ್ಟಗಳು ಎದುರಾದರೂ ಎಲ್ಲರ ಸಹಾಯದಿಂದ ಹತ್ತು ವರ್ಷಗಳ ಹಿಂದೆ ನಾವು ದೆಹಲಿಯ ಕನ್ನಡಿಗರಿಗೆ ತಮ್ಮದೇ ಆದ ಸಾಂಸ್ಕೃತಿಕ ಸಮುಚ್ಚಯವನ್ನು ನಿರ್ಮಿಸಲು ಸಾಧ್ಯವಾಯಿತೆಂದು ವಿವರಿಸಿದರು. ಕನ್ನಡಿಗರು ಆಡಳಿತ, ಮಾಧ್ಯಮ, ಕಲೆ ಮತ್ತು ಸಂಸ್ಕೃತಿ ಮೊದಲಾದ ಕ್ಷೇತ್ರಗಳಲ್ಲಿ ಅಪಾರವಾದ ಸಾಧನೆಯನ್ನು ಮಾಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಂತೂ ಬಹಳಷ್ಟು ಜ್ಞಾನಪೀಠ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಆದರೆ ಕನ್ನಡಿಗರ ಸಾಧನೆಗಳು ದೆಹಲಿಯಲ್ಲಿ ಉತ್ತಮ ರೀತಿಯಲ್ಲಿ ಪ್ರತಿಬಿಂಬಿತವಾಗುತ್ತಿರಲಿಲ್ಲ. ಆದರೆ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ನಂತರ ಬಹಳಷ್ಟು ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಇಲ್ಲಿ ಕನ್ನಡಿಗರ ಪ್ರತಿಭೆಗೆ ಪ್ರೋತ್ಸಾಹ ದೊರಕಿದೆ ಎಂದು ಅವರು ನುಡಿದರು.

ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ಸಂದರ್ಭದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವಿರೇಂದ್ರ ಹೆಗ್ಗಡೆ ಅವರಿಂದ, ಕರ್ನಾಟಕ ಬ್ಯಾಂಕಿನಿಂದ ಮಾತ್ರವಲ್ಲದೇ ಕರ್ನಾಟಕ ಫುಡ್ ಸೆಂಟರ್‌ನಿಂದಲೂ ಬಹಳಷ್ಟು ಸಹಾಯ ದೊರೆಯಿತು ಎಂದು ಅವರು ನುಡಿದರು. ಕರ್ನಾಟಕ ಸರ್ಕಾರವು ಕ್ರಿಯಾಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುದಾನವನ್ನು ನೀಡುತ್ತಿರುವುದರಿಂದ ಪ್ರತಿ ವಾರ ಕಾರ್ಯಕ್ರಮಗಳು ನಡೆಯುತ್ತಾ ಇದೆ. ಹೆಚ್ಚು

ಹೆಚ್ಚು ಕನ್ನಡಿಗರು ಬರುತ್ತಾರೆ, ಭಾಗವಹಿಸುತ್ತಾರೆ ಮತ್ತು ಹೊಗಳಿಕೆಯ ಮಾತುಗಳನ್ನಾಡುತ್ತಾರೆ ಮತ್ತು ಸಂಘದ ಪಕ್ಕದಲ್ಲಿ ಇರುವ ಮೆಟ್ರೋ ನಿಲ್ದಾಣಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣ ಎಂದು ನಾಮಕರಣ ಮಾಡುತ್ತಿರುವುದು ಕನ್ನಡಿಗರಿಗೆಲ್ಲ ಹೆಮ್ಮೆಯ ಸಂಗತಿ ಎಂದು ಶ್ರೀ ರಾಮಮೋಹನ್ ರಾವ್ ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷ ಮತ್ತು ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಕನಸನ್ನು ಕಂಡು ಅದಕ್ಕೆ ತುಂಬಾ ಕೆಲಸ ಮಾಡಿ, ಅದಕ್ಕಿದ್ದ ಆರಂಭದ ಅಡ್ಡಿ ಅಡಚಣೆಗಳನ್ನು ನಿವಾರಿಸಿದ ಶ್ರೀ ಕೆ.ಆರ್. ನಾಗರಾಜ ಅವರು ಇವತ್ತು ನಮ್ಮ ಜೊತೆ ಇರಬೇಕಾಗಿತ್ತು ಎಂದು ಸ್ಮರಿಸಿದರು.

**ಕೆ.ಎಸ್. ನರಸಿಂಹಸ್ವಾಮಿ ನೆನಪು– ಮೈಸೂರು ಮಲ್ಲಿಗೆ ಕಾರ್ಯಕ್ರಮವನ್ನು ವೈ.ಕೆ. ಮುದ್ದುಕೃಷ್ಣ, ಶ್ರೀನಿವಾಸ ಉಡುಪ, ಮೃತ್ಯುಂಜಯ ದೊಡ್ಡವಾಡ, ಇಂದು ವಿಶ್ವನಾಥ್, ಡಾ. ರೋಹಿಣಿ ಮೋಹನ್, ಸುರೇಖ ಕೆ.ಎಸ್, ಎಸ್.ಸುನೀತ ಅವರು ನಡೆಸಿಕೊಟ್ಟರು.**

**ಡಾ. ದೊಡ್ಡರಂಗೇಗೌಡ ಅವರ ಅಧ್ಯಕ್ಷತೆಯಲ್ಲಿ–ಕವಿಯ ನೋಡಿ ಕವಿತೆ ಕೇಳಿ ಕಾರ್ಯಕ್ರಮದಲ್ಲಿ ಕವಿಗಳಾದ ಡಾ. ಎಚ್.ಎಸ್. ವೆಂಕಟೇಶ್‌ಮೂರ್ತಿ, ಎಂ.ಎನ್. ವ್ಯಾಸರಾವ್ ಮತ್ತು ಬಿ.ಆರ್. ಲಕ್ಷ್ಮಣ್ ರಾವ್, ಗಾಯಕರುಗಳಾದ ಡಾ. ಕಿಕ್ಕೇರಿ ಕೃಷ್ಣಮೂರ್ತಿ, ಜೋಸೆಫ್ ಹೆರಾನಿಮಸ್, ಸೀಮಾರಾಯ್ಕರ್, ಮಂಗಳಾರವಿ ಮತ್ತು ಸುರೇಖ ಹೆಗ್ಡೆ ಅವರು ನಡೆಸಿಕೊಟ್ಟರು.**

**ಇದೇ ಗಾಯಕರು ಮತ್ತು ಡಾ. ಮುದ್ದುಮೋಹನ್, ರಮೇಶ್ ಚಂದ್ರ, ಡೇವಿಡ್, ಪಂಚಮ್ ಹಳಿಬಂಡಿ ಮತ್ತು ಸಿ.ಜೆ. ಪೂರ್ಣಿಮಾ ಅವರಿಂದ ಕವಿಚಿತ್ರಗೀತೆಗಳು ನಡೆಯಿತು.
ಡಾ. ಬಿ.ಕೆ. ಸಮಿತ್ರ, ಅಪ್ಪಗೆರೆ ತಿಮ್ಮರಾಜು ಮತ್ತು ಡೇವಿಡ್ ಅವರಿಂದ ಜಾನಪದ ಝೇಂಕಾರ ಕಾರ್ಯಕ್ರಮ ನಡೆಯಿತು. ಎಲ್ಲ ಗಾಯಕರು ಸೇರಿ ಕನ್ನಡ ಡಿಂಡಿಮವನ್ನು ಹಾಡಿದರು. ನಾಗಲಕ್ಷ್ಮೀರಾವ್ ಮತ್ತು ತಂಡದಿಂದ ಗೀತ ನೃತ್ಯ ಕಾರ್ಯಕ್ರಮ ನೆರವೇರಿತು.**

ಈ ಕಟ್ಟಡದ ನಿರ್ಮಾಣ ಸಮಯದಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿದ ಶ್ರೀ ಭೀಮರಾವ್ ಮುರಗೋಡ, ಶ್ರೀ ಎಸ್. ಕೃಷ್ಣ ಭಟ್ ಇನ್ನೂ ಹಲವರನ್ನು ನೆನೆಯುತ್ತಾ ಇದು ಸಾಮೂಹಿಕವಾದ ಕೊಡುಗೆ, ಒಬ್ಬನ ವೈಯಕ್ತಿಕ ಕೊಡುಗೆ ಅಲ್ಲ ಎಂದರು. ರಾಜಧಾನಿಯಲ್ಲಿ ಬೆಳೆದ ಈ ಕಟ್ಟಡ ಹೊರನಾಡ ಕನ್ನಡಿಗರ ಶ್ರಮದ, ಬದ್ಧತೆ, ಮತ್ತು ಪ್ರಾಮಾಣಿಕತೆಯ ಪ್ರತೀಕವಾಗಿದೆ. ಕಟ್ಟಡ ನಿರ್ಮಾಣ ಸಮಯದಲ್ಲಿ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಿಡುಗಡೆ ಮಾಡಿ ತರುವಲ್ಲಿ ಪಟ್ಟ ಶ್ರಮ ಮತ್ತು ಡಾ. ವೈ.ಕೆ. ಮುದ್ದುಕೃಷ್ಣ ಮತ್ತು ಡಾ. ಮುದ್ದುಮೋಹನ್ ಅವರು ನೀಡಿದ ಸಹಾಯವನ್ನು ಸ್ಮರಿಸಿಕೊಂಡರು. ಇದಲ್ಲದೆ ಕನ್ನಡದ ಪತ್ರಕರ್ತರು ಆ ಸಮಯದಲ್ಲಿ ಕಟ್ಟಡದ ಕೆಲಸಕ್ಕೆ ಸಹಾಯವಾಗಿ ನಿಲ್ಲದೇ ಇರುತ್ತಿದ್ದರೆ ಅಷ್ಟು ದೊಡ್ಡ ಮಟ್ಟದಲ್ಲಿ ದುಡ್ಡು ಬರುತ್ತಿರಲಿಲ್ಲ. ಸಣ್ಣ ಕಾರ್ಯಕ್ರಮಗಳನ್ನು ದೊಡ್ಡದಾಗಿ ಮಾಡಿ, ಪತ್ರಿಕೆಯಲ್ಲಿ ದೆಹಲಿ ಕರ್ನಾಟಕ ಸಂಘದ ಮೇಲೆ ಒಳ್ಳೆಯ ಅಭಿಪ್ರಾಯ ಮೂಡುವಂತೆ ಮಾಡಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ಶ್ರೀಮತಿ ಶೀಲಾ ದೀಕ್ಷಿತ್ ಅವರು ಸಂಘಕ್ಕೆ ನೀಡಿದ ದೇಣಿಗೆ ತುಂಬಾ ಮಹತ್ವಪೂರ್ಣವಾದುದು ಎಂದರು.

ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ ಅವರಿಗೆ ಅಭಿನಂದನೆ ಸಲ್ಲಿಸಿದರು. ಡಾ. ಎಂ.ಎಂ. ಕಲಬುರ್ಗಿ ಅವರ ನಿಧನ ಸುದ್ದಿಯನ್ನು ತಿಳಿಸುತ್ತಾ ಇಂದು ನಾವು ಸಂಘದ ದಶಮಾನೋತ್ಸವ ಸಮಾರಂಭವನ್ನು ಆಚರಿಸಬೇಕೋ ಅಥವಾ ಸಂಗೀತವನ್ನು ಸವಿಯಬೇಕೋ ಅಥವಾ ಮೈ ಮನಸ್ಸು ಬಿಟ್ಟು ಸುಮ್ಮನೆ ಕೂತು ಕಲಬುರ್ಗಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಬೇಕೋ ಎಂದು ಡಾ, ಬಿಳಿಮಲೆ ಆಘಾತ ವ್ಯಕ್ತಪಡಿಸಿದರು.

ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘಕ್ಕೆ ದಿನೆ ದಿನೇ ಬರುವ ಕನ್ನಡಿಗರ ಸಂಖ್ಯೆ ಅತ್ಯಂತ ಹೆಚ್ಚಾಗಿದೆ. ಕಳೆದ 7–8 ತಿಂಗಳಿಂದ ಪಕ್ಕದ ಗುರ್‌ಗಾಂವ್‌ನಲ್ಲಿ ಸಾಂಸ್ಕೃತಿಕ ಸಮುಚ್ಚಯ ಮತ್ತು ವಸತಿ ನಿಲಯವನ್ನು ನಾವೆಲ್ಲರೂ ಸೇರಿ ಮಾಡಬೇಕೆನ್ನುವ ಕಲ್ಪನೆಯನ್ನು ಇಟ್ಟುಕೊಂಡಿದ್ದೇವೆ. ಅದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯವರು ಬೆಂಗಳೂರಿನಲ್ಲಿ ನಮ್ಮನ್ನು ಅಭಿನಂದಿಸಿದ್ದಾರೆ ಮತ್ತು ಅದಕ್ಕೆ ಸ್ಪಂದಿಸಿದ್ದಾರೆ. ಶ್ರೀ ಸುದರ್ಶನ್ ಮತ್ತು ಕೇಂದ್ರದ ಸಚಿವರಾದ ಶ್ರೀ ಅನಂತ್ ಕುಮಾರ್ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಅವರು ನಾವು ನಿಮ್ಮ ಜೊತೆಗೆ ಇದ್ದೇವೆ ಎಂದು ಭರವಸೆ ನೀಡಿದ್ದಾರೆ. ಅವರ ಸಹಕಾರ ಮತ್ತು ನಿಮ್ಮೆಲ್ಲರ ಸಹಯೋಗದಿಂದ ಮುಂದಿನ ವರ್ಷಗಳಲ್ಲಿ ಇದು ಸಾಕಾರವಾಗಬಹುದೆಂದು ತಿಳಿದುಕೊಂಡಿದ್ದೇನೆ ಎಂದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಡಾ. ವೈ. ಕೆ. ಮುದ್ದುಕೃಷ್ಣ ಮತ್ತು ಡಾ. ಮುದ್ದುಮೋಹನ್ ಅವರೂ ಈ ಸಂದರ್ಭದಲ್ಲಿ ಮಾತಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಶ್ರೀಮತಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರೂಪಿಸಿದರು. ಅ

***ಅಭಿಮತ ವರದಿ***















**ಸನ್ಮಾನ ಮತ್ತು ಗೌರವಾರ್ಪಣೆ :** ತಮ್ಮ ಕನಸಿನ ಕೂಸಾಗಿದ್ದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ಅವರ್ಣನೀಯ ಶ್ರಮ ಪಟ್ಟ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಇನ್ನ ರಾಮಮೋಹನ ರಾವ್ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರನ್ನು ಶಾಲು ಹೊದಿಸಿ ಗೌರವಿಸಲಾಯಿತು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಅರ್ಪಿಸಿರುವ ಪ್ರಪ್ರಥಮ ಹೊರನಾಡ ಸುಗಮ ಸಂಗೀತ ಸಮ್ಮೇಳನ–ಗೀತೋತ್ಸವದಲ್ಲಿ ಪಾಲ್ಗೊಂಡು ಎಲ್ಲರ ಮನರಂಜಿಸಿದ ಕಲಾವಿದರನ್ನು ಗೌರವಿಸಲಾಯಿತು.

ದೆಹಲಿ ಕರ್ನಾಟಕ ಸಂಘದಲ್ಲಿ ಸುಮಾರು 30 ವರ್ಷಗಳಿಂದ ಉಚಿತ ವೈದ್ಯಕೀಯ ಸೇವೆಯನ್ನು ಕೊಡುತ್ತಿರುವಂತಹ ಆಯುರ್ವೇದ ವೈದ್ಯ ಡಾ. ಭೀಮ ಭಟ್, ಸಂಘದಲ್ಲಿ ಭಾನುವಾರ ವಿಶೇಷವಾಗಿ ವೈದ್ಯಕೀಯ ಸೇವೆಯನ್ನು ನೀಡುತ್ತಿರುವಂತಹ ಧರ್ಮಶೀಲ ಕ್ಯಾನ್ಸರ್ ಆಸ್ಪತ್ರೆಯ  ಕ್ಯಾನ್ಸರ್ ತಜ್ಞ ಡಾ. ನಿರಂಜನ್ ನಾಯ್ಕ್, ಯೋಗ ಮತ್ತು ಆಯುರ್ವೇದ ತಜ್ಞರಾಗಿದ್ದು ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆ ನೀಡುತ್ತಿರುವಂತಹ ಡಾ. ಸಾಯಿಪ್ರಶಾಂತಿ ಶೆಟ್ಟಿ, ಸಂಘದಲ್ಲಿ ವಾರಾಂತ್ಯ ಉಚಿತ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಿರುವ ಎಲುಬು ತಜ್ಞ ಡಾ. ಗುರುರಾಜ್ ಸಂಗೊಂದಿ ಮಠ್ ಅವರೆಲ್ಲರನ್ನೂ ಗೌರವಿಸಲಾಯಿತು.

ಸಾಂಸ್ಕೃತಿಕ ಸಮುಚ್ಚಯದ ಅನೇಕ ಕಾರ್ಯಕ್ರಮಗಳನ್ನು ಪ್ರಕಟಪಡಿಸಿ ಸಂಘದ ಕಾರ್ಯಚಟುವಟಿಕೆಗಳನ್ನು ದೆಹಲಿ ಮತ್ತು ಕರ್ನಾಟಕ ರಾಜ್ಯದೆಲ್ಲೆಡೆ ಪ್ರಚುರಪಡಿಸುತ್ತಿರುವಂತಹ ಸಂಘದ ಮುಖಪತ್ರಿಕೆ ಅಭಿಮತದ ಸಂಪಾದಕೀಯ ಮಂಡಳಿಯ ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ, ಶ್ರೀಮತಿ ಸವಿತಾ ಇನಾಂದಾರ್ ಮತ್ತು ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಅವರನ್ನು ಸನ್ಮಾನಿಸಲಾಯಿತು.

**ಪುಸ್ತಕ ಬಿಡುಗಡೆ :** ಇದೇ ಸಂದರ್ಭದಲ್ಲಿ ಶ್ರೀ ಸುಧಾಕರ ಕುರಂದವಾಡ ಅವರು ಬರೆದಿರುವ ನಾನು–ನೀನು ಕವನ ಸಂಕಲನವನ್ನು ಬಿಡುಗಡೆ ಮಾಡಲಾಯಿತು.

**ಗಾನ ವೈಭವ ಸಿ.ಡಿ. ಬಿಡುಗಡೆ**

ಡಾ. ಹರ್ಷಕುಮಾರ್ ರೈ, ಮಾಡಾವು ಇವರ ನಿರ್ಮಾಣದಲ್ಲಿ ಮೂಡಿ ಬಂದಿರುವ ಜನ್ಮ ಕ್ರಿಯೇಶನ್ಸ್ ಅವರ ಅಷ್ಟಕ್ಷೇತ್ರ ಗಾನ ವೈಭವ ಸಿ.ಡಿ.ಯ ಬಿಡುಗಡೆಯೂ ಸಮಾರಂಭದಲ್ಲಿ ನಡೆಯಿತು. ಈ ಸಿ.ಡಿ.ಯಲ್ಲಿ ಹಾಡಿರುವಂತಹ ಗಾಯಕಿಯಾದ ಶ್ರೀಮತಿ ಸುರೇಖಾ ಕೆ.ಎಸ್. ಅವರು ಉಪಸ್ಥಿತರಿದ್ದರು.





## ದೆಹಲಿ ಕರ್ನಾಟಕ ಸಂಘದ ಕಲಾವಿದರಿಂದ ಜಾನಪದ ಸಮೂಹ ನೃತ್ಯ ಮತ್ತು ಸಮೂಹ ಗಾಯನ

ಜನಕಪುರಿ ಮಹಿಳಾ ಮಂಡಳಿ : ಕಲ್ಪನಾ ದೇಶಪಾಂಡೆ, ಮಮತಾ ದೇಶಪಾಂಡೆ, ಮಾಲಿನಿ ಪ್ರಹ್ಲಾದ್, ಮೀರಾ ನಾಡಿಗ್, ಮೋಹಿನಿ ರೈ, ಸವಿತಾ ಭಂಡಾರ್‌ಕರ್, ಸವಿತಾ ನೆಲ್ಲಿ, ಸವಿತಾ ಇನಾಮದಾರ್ ಮತ್ತು ಕು. ವಾಸುಕಿ ದೇಶಪಾಂಡೆ.
ದೆಹಲಿ ತುಳು ಸಿರಿ : ಅನಿತಾ ನಾಯ್ಕ್, ಅರವಿಂದ್ ಬಿಜೈ, ಬಾಲಕೃಷ್ಣ ನಾಯ್ಕ್, ಕೆ.ಎಸ್.ಜಿ. ಶೆಟ್ಟಿ, ಪ್ರಕಾಶ್ ಶೆಟ್ಟಿ ಉಳೆಪಾಡಿ, ಪೃಥ್ವಿ ಕಾರಿಂಜೆ, ಡಾ. ಪುರುಷೋತ್ತಮ ಬಿಳಿಮಲೆ, ಡಾ. ಸಾಯಿಪ್ರಶಾಂತಿ ಶೆಟ್ಟಿ, ಸುನಿತಾ, ವಂದನಾ ಶೆಟ್ಟಿ.
ಕಾವೇರಿ ತಂಡ : ಶೈಲಾ ಕುಮಾರ್, ಲೀಲಾ ದೇವರಾಜ್, ನೇತ್ರಕುಮಾರ್, ವಿಸ್ಮಯಕುಮಾರ್, ಚೇತನ, ದಿವ್ಯ
ತತ್ವಪದ : ಅಮರೇಶ್, ಎಸ್. ಕುಮಾರ್, ಮಹದೇವ್, ಸುಧೀರ್ ಫಡ್ನೀಸ್, ಶಶಿಕಾಂತ್ ಪಾಟಿಲ್, ಟಿ.ಎಂ. ಮೈಲಾರಪ್ಪ, ಚಿದಂಬರ ಕೋಟೆ, ಶಿವಲಿಂಗಪ್ಪ
ಚಿನ್ನಾರಿ ತಂಡ : ಲಿಖಿತ್ ಮಹದೇವ, ಶ್ರೀವಿದ್ಯಾ, ರಮ್ಯ, ಕೃಷ್ಣ, ಭಾಗ್ಯಶ್ರೀ, ರಿತ್ವಿಕ್ ನೆಲ್ಲಿ.
ಗೋಕರ್ಣ ಮಂಡಳ ತಂಡ : ವಿದ್ಯಾಭಟ್, ಸಂತೋಷ್ ಕುಮಾರ್ ಉಪಾಧ್ಯಾಯ, ಶಾಲಿನಿ ಭಟ್, ಕಿರಣ, ನಿಖಿತ, ರಂಜಿತ, ವಿಶ್ವನಾಥ್ ಹೆಗ್ಗಡೆ, ನವ್ಯ, ಅನ್ವಿತ
ಡಿವಿಜಿಎಸ್ ತಂಡ : ಮಾಚಿಮಂಡ ಕಾರ್ಯಪ್ಪ, ಟಿ.ಪಿ. ಬೆಳ್ಳಿಯಪ್ಪ, ಗಿರೀಶ್, ಎ.ಟಿ. ಶ್ರೀನಿವಾಸ, ಮೋಹನ್, ಜಗದೀಶ, ನಾರಾಯಣ ಬಿ., ರಾಘವೇಂದ್ರ, ಶಶಿಕಾಂತ್ ಪಾಟೀಲ್, ಜಯಶ್ರೀನಿವಾಸ್, ಸುಚಿ ಶ್ರೀನಿವಾಸ್, ಸ್ವಾತಿ ಶ್ರೀನಿವಾಸ್, ಗಾನವಿ ಗಿರೀಶ್, ನಳಿನಿ ಲವ.
ಶಿವಪ್ಪ ತಂಡ : ಲಕ್ಷ್ಯ ನಾಗರಾಜ, ಅಭಿಷೇಕ್, ಶಾಶ್ವತ್, ಕ್ಷಿತಿಜ್, ನವ್‌ಯುಗ್, ಧನುಶ್
ರಂಗೋಲಿ ತಂಡ : ಶೋಭಾ ನಾಗರಾಜ, ದೀಪಾ ಶಿವಪ್ಪ, ಮಂಜುಳಾ ನಾಗರಾಜ, ರೂಪಶ್ರೀ, ಪ್ರತಿಭಾ ಗೌಡ, ಮತ್ತು ಶಿಲ್ಪ ಹರಿಪ್ರಿಯ
ಡಿವಿಜಿಎಸ್. : ಎಸ್.ಸಿ. ಹೇಮಲತ, ಜಯಾ ಶ್ರೀನಿವಾಸ, ಗಿರಿಜಾ ಶ್ರೀನಿವಾಸ, ಮನಸ್ವಿ ರಾಜೇಂದ್ರ, ಡಾ.ವಿ.ಆರ್. ಗುಡ್ಡೇಗೌಡ, ಪಿ.ಸಿ. ಶ್ರೀನಿವಾಸ
ಹೊಂಗಿರಣ : ತಾರಾ ರಮೇಶ್, ವೀಣಾ ಕೋಟೆ, ಆಶಾಲತಾ ಮಹದೇವ್, ಕೃಷ್ಣರಾಜ್, ಶಿವಪ್ಪ, ಹರಿಪ್ರಿಯ, ಭುವನ್, ವಿಸ್ರುತ್
ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ. ಅವರು ನಡೆಸಿಕೊಟ್ಟರು. ಅ

***ಅಭಿಮತ ವರದಿ***


















# ದೆಹಲಿಯಲ್ಲಿ ಮೊಳಗಿದ ಕನ್ನಡ ಡಿಂಡಿಮ

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಬೆಂಗಳೂರು ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ನೋಯ್ಡಾದ ಜೆ.ಎಸ್.ಎಸ್. ಇಂಜೆನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಆಗಸ್ಟ್ 29ರಂದು ಗೀತೋತ್ಸವ–ದೆಹಲಿ ಕಾರ್ಯಕ್ರಮ ನಡೆಯಿತು. ಖ್ಯಾತ ಕವಿಗಳು ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರಾದ ಡಾ. ದೊಡ್ಡರಂಗೇ ಗೌಡ ಅವರು ಸಮಾರಂಭದ ಉದ್ಘಾಟನೆಯನ್ನು ಮಾಡಿದರು, ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು. ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜೆ.ಎಸ್.ಎಸ್. ತಾಂತ್ರಿಕ ವಿಶ್ವವಿದ್ಯಾಲಯದ ಸಲಹೆಗಾರರಾದ ಪ್ರೊ. ಎಂ.ಐ. ಗುಪ್ತ, ಖ್ಯಾತ ಕವಿಗಳಾದ ಎಂ.ಎನ್. ವ್ಯಾಸರಾವ್, ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರು ಸಮಾರಂಭದ ಗಣ್ಯರಾಗಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಸಿ.ಡಿ. ಮತ್ತು ಪುಸ್ತಕ ಬಿಡುಗಡೆಯನ್ನು ಶ್ರೀ ಸದಾನಂದ ಮುಡಗೂರ್ ಮತ್ತು ಡಾ. ಹೆಚ್.ಎಸ್. ವೆಂಟೇಶಮೂರ್ತಿ ಅವರು ನಡೆಸಿಕೊಟ್ಟರು.

ಸುಗಮ ಸಂಗೀತ ಸಮ್ಮೇಳನದಲ್ಲಿ ಖ್ಯಾತ ಕಲಾವಿದರಾದ ಡಾ. ಬಿ.ಕೆ. ಸುಮಿತ್ರ, ಶ್ರೀ ವೈ.ಕೆ. ಮುದ್ದುಕೃಷ್ಣ, ಡಾ. ಕಿಕ್ಕೇರಿ ಕೃಷ್ಣಮೂರ್ತಿ, ಶ್ರೀ ಶ್ರೀನಿವಾಸ ಉಡುಪ, ಪುತ್ತೂರು ನರಸಿಂಹ ನಾಯಕ್, ಇಂದು ವಿಶ್ವನಾಥ್, ರೋಹಿನಿ ಮೋಹನ್, ಮುದ್ದುಮೋಹನ್, ಮೃತ್ಯುಂಜಯ ದೊಡ್ಡವಾಡ, ಪಂಚಮ ಹಳಿಬಂಡಿ, ಅಪ್ಪಗೆರೆ ತಿಮ್ಮರಾಜು, ಎಸ್. ಸುನೀತ, ಸುರೇಖ ಹೆಗ್ಡೆ, ಕೆ.ಎಸ್. ಸುರೇಖ, ಡೇವಿಡ್, ಜೋಸೆಫ್ ಹೆರಾನಿಮಸ್, ಮಂಗಳಾರವಿ ಮುಂತಾದ ಕಲಾವಿದರು ಕನ್ನಡ ಡಿಂಡಿಮ ಕಾರ್ಯಕ್ರಮ ನಡೆಸಿಕೊಟ್ಟರು ಮತ್ತು ನಾಗಲಕ್ಷ್ಮೀರಾವ್ ಮತ್ತು ತಂಡದಿಂದ ಗೀತ ನೃತ್ಯ ಕಾರ್ಯಕ್ರಮ ಜರುಗಿತು. ಅ

*ಅಭಿಮತ ವರದಿ*













# ದಕ್ಷಿಣ ಕನ್ನಡದ ಒಕ್ಕಲಿಗರ ಕುರಿತು ಪುಸ್ತಕ ಬಿಡುಗಡೆ




ವಿಭಿನ್ನ ಸಮುದಾಯಗಳ ಪೂರ್ವ ಇತಿಹಾಸವನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ ಎಂದು ರಾಜ್ಯಸಭೆ ಸದಸ್ಯ ಪ್ರೊ. ಎಂ.ವಿ. ರಾಜೀವ್ ಗೌಡ ಅವರು ಹೇಳಿದರು. ಅವರು ದೆಹಲಿ ಒಕ್ಕಲಿಗ ಗೌಡ ಸಂಘದ ಆಶ್ರಯದಲ್ಲಿ ಶ್ರೀ ಪುತ್ತೂರು ಅನಂತರಾಜ ಗೌಡ ಅವರು ಬರೆದ ಇನ್ ಪರ್ಸ್ಯೂಟ್ ಆಫ್ ಅವರ್ ರೂಟ್ ಎಂಬ ಇಂಗ್ಲೀಷ್ ಪುಸ್ತಕವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಆಗಸ್ಟ್ 4ರಂದು ಬಿಡುಗಡೆಗೊಳಿಸಿ ಮಾತಾಡುತ್ತಿದ್ದರು.

ತಾವು ಹುಟ್ಟಿ ಬಂದ ಊರು, ತಮ್ಮ ವಿವಾಹದ ಸ್ಥಳ ಮತ್ತು ತಮ್ಮ ಪೂರ್ವಿಕರ ಬೇರುಗಳನ್ನು ನೆನೆಯಬೇಕು. ದಕ್ಷಿಣ ಕನ್ನಡದ ಒಕ್ಕಲಿಗದ ಬೇರುಗಳ ಬಗ್ಗೆ ತಿಳಿದುಕೊಳ್ಳಲು ಪುಸ್ತಕಗಳ ಅಭಾವವಿದೆ. ಆದರೆ ಈ ಪುಸ್ತಕದ ಅಧ್ಯಯನದಿಂದ ಆ ಭಾಗದ ಒಕ್ಕಲಿಗರ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗಲಿದೆ ಎಂದು ಪ್ರೊ. ಗೌಡ ಅವರು ಹೇಳಿದರು. ಈ ಪುಸ್ತಕ ಇಂಗ್ಲಿಷ್ ಭಾಷೆಯಲ್ಲಿರುವುದರಿಂದ ಕನ್ನಡ ಗೊತ್ತಿಲ್ಲದ ಹೊಸ ತಲೆಮಾರಿನ ಹಾಗೂ ಹೊರನಾಡಿನಲ್ಲಿ ಬದುಕುತ್ತಿರುವ ಯುವ ಜನಾಂಗಕ್ಕೆ ಒಂದು ರೀತಿಯ ಕೈಪಿಡಿಯಾಗಿದೆ, ಎಂದರು.

"ನಾನು ವಿದೇಶದ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ಆಂಗ್ಲ ಲೇಖಕರು ಒಕ್ಕಲಿಗ ಸಮುದಾಯದ ಬಗ್ಗೆ ಬರೆದಿರುವ ಪುಸ್ತಕವನ್ನು ವಿದೇಶದ ಗ್ರಂಥಾಲಯವೊಂದರಲ್ಲಿ ಕುಳಿತು ಓದುವುದು ಸಂತೋಷಕರವಾಗಿತ್ತು. ಆದ್ದರಿಂದ ಹೆಚ್ಚು ಹೆಚ್ಚು ಪುಸ್ತಕಗಳನ್ನು ಆಯಾ ಸಮುದಾಯದ ಬೇರುಗಳ ಬಗ್ಗೆ ಲೇಖಕರು ಬರೆಯಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಸಂಶೋಧನೆ ಮತ್ತು ಪೂರ್ವೇತಿಹಾಸದ ಬಗ್ಗೆ ಪುಸ್ತಕಗಳನ್ನು ಬರೆಯುವುದು ತೀರಾ ವಿರಳವಾಗುತ್ತಿರುವ ಸಂದರ್ಭದಲ್ಲಿ ಶ್ರೀ ಪುತ್ತೂರು ಅನಂತರಾಜ ಗೌಡರು ಹಳ್ಳಿ ಹಳ್ಳಿಗಳಿಗೆ ಭೇಟಿ ನೀಡಿ ಜನರನ್ನು ಸಂದರ್ಶಿಸಿ ಈ ರೀತಿಯ ಉತ್ತಮ ಕೃತಿಯನ್ನು ಬರೆದಿರುವುದು ಅಭಿನಂದನಾರ್ಹ" ಎಂದರು.

ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಲೋಕಸಭಾ ಸದಸ್ಯೆ ಕು. ಶೋಭಾ ಕರಂದ್ಲಾಜೆ ಅವರು ಮಾತನಾಡುತ್ತಾ ಈ ಪುಸ್ತಕವು ದಕ್ಷಿಣ ಕನ್ನಡದ ಒಕ್ಕಲಿಗರ ಮೂಲದ ಬಗ್ಗೆ ಬೆಳಕು ಚೆಲ್ಲುವ ಅತ್ಯುತ್ತಮ ಕೃತಿ. ದಕ್ಷಿಣ ಕನ್ನಡದ ಒಕ್ಕಲಿಗರು ಇತ್ತ ಬಂಟ ಸಮುದಾಯ, ಅತ್ತ ಬಯಲು ಸೀಮೆ ಒಕ್ಕಲಿಗರು ಮತ್ತು ಕೊಡವರು ಇವರೆಲ್ಲರ ನಡುವೆ ತಮ್ಮ ಗುರುತನ್ನು ಉಳಿಸಿಕೊಳ್ಳುವ ಸಂಘರ್ಷ ಮಾಡಿದ್ದಾರೆ. ಈ ಪುಸ್ತಕದ ಮೂಲಕ ಹೊರಜಗತ್ತಿಗೆ ಆ ಭಾಗದ ಒಕ್ಕಲಿಗರ ಪೂರ್ವೇತಿಹಾಸವನ್ನು ತಿಳಿಸಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಇದರ ಮುಖಾಂತರ ಒಕ್ಕಲಿಗ ವೈವಾಹಿಕ ಸಂಬಂಧಗಳು ಕೊಡಗು, ಬಯಲುಸೀಮೆ ಒಕ್ಕಲಿಗರು ಮುಂತಾದ ಕಡೆ ಬೆಳೆಯಬೇಕು ಮತ್ತು ಇದರ ಮೇಲೆ ಇನ್ನಷ್ಟು ಸಂಶೋಧನಾತ್ಮಕ ಪುಸ್ತಕಗಳು ಹೊರ ಬರಬೇಕು ಎಂದು ತಿಳಿಸಿದರು.

ಈ ಕಷ್ಟ ಸಾಧ್ಯವಾದ ಕೆಲಸದಲ್ಲಿ ಕೈಹಾಕಿ ಅತ್ಯುತ್ತಮ ಪುಸ್ತಕವನ್ನು ಬರೆದಿರುವುದಕ್ಕಾಗಿ ಶ್ರೀ ಅನಂತರಾಜ ಗೌಡರನ್ನು ಅಭಿನಂದಿಸಿದರು. ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘಕ್ಕೆ ಒಂದು ಶಾಶ್ವತ ನೆಲೆಯನ್ನು ಮಾಡಬೇಕು ಹಾಗೂ ಅದಕ್ಕೆ ಬೇಕಾದ ಎಲ್ಲಾ ಸಲಹೆ, ಸಹಕಾರ ಮತ್ತು ನೆರವನ್ನು ನೀಡಲು ಒಕ್ಕಲಿಗ ಸಮುದಾಯದ ಸಂಸದರಾದ ನಾವೆಲ್ಲಾ ತಯಾರಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಕು. ಶೋಭಾ ಕರಂದ್ಲಾಜೆ ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಈ ಪುಸ್ತಕಕ್ಕೆ ಮುನ್ನುಡಿ ಬರೆದು ಪುಸ್ತಕ ಹೊರಬರಲು ಎಲ್ಲಾ ರೀತಿಯ ಸಹಾಯ ಮಾಡಿದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ಎರಡನೇ ಶತಮಾನದಿಂದ ಇಲ್ಲಿಯವರೆಗೆ ದಕ್ಷಿಣ ಕನ್ನಡದ ಒಕ್ಕಲಿಗರ ಮೂಲವನ್ನು ತಿಳಿಸಿಕೊಡುವ ಅತ್ಯುತ್ತಮ ಸಂಶೋಧನಾ ಪುಸ್ತಕ ತರುವಲ್ಲಿ ಶ್ರೀ ಅನಂತರಾಜ ಗೌಡರು ಹೆಚ್ಚಿನ ಶ್ರಮವಹಿಸಿದ್ದಾರೆ. ತನ್ನ ಸಮುದಾಯದ ಬೇರುಗಳ ಮೂಲವನ್ನು ಹೊರಹೆಕ್ಕಿ ತೆಗೆದು ತಮ್ಮ ಮುಂದಿನ ತಲೆಮಾರಿಗೆ ತಿಳಿಸಿಕೊಡಬೇಕೆನ್ನುವಲ್ಲಿ ಅವರ ಸಮುದಾಯದ ಅಭಿಮಾನ ಎದ್ದು ಕಾಣುತ್ತದೆ. ಜನರನ್ನು ಮೌಖಿಕ ಸಂದರ್ಶನ ಮಾಡುತ್ತಾ ಅವರ ಪರಂಪರೆ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ತಿಳಿದು ಅದನ್ನು ತಮ್ಮ ಪುಸ್ತಕದಲ್ಲಿ ನೈಜವಾಗಿ ಹೊರತಂದಿದ್ದಾರೆ. ಹೊಸ ತಲೆಮಾರಿನ ವಿದ್ಯಾರ್ಥಿಗಳು ಹೊಸ ಶಿಕ್ಷಣ ಪದ್ಧತಿಯಿಂದ ತಮ್ಮ ಸಮುದಾಯದ ಮೂಲವನ್ನು ತಿಳಿಯುವಲ್ಲಿ ವಂಚಿತರಾಗುತ್ತಿದ್ದಾರೆ, ಇದರಿಂದ ತಮ್ಮ ಗುರುತನ್ನು ಕಳೆದುಕೊಳ್ಳುವ ಅಪಾಯವಿದೆ ಎನ್ನುತ್ತಾ ಶ್ರೀ ಅನಂತರಾಜ ಗೌಡರು ಈ ರೀತಿಯ ಕಷ್ಟಸಾಧ್ಯವಾದ ಮಹತ್ಕಾರ್ಯಕ್ಕೆ ಕೈಹಾಕಿ ಯಶಸ್ವಿಯಾಗಿರುವುದಕ್ಕೆ ಅವರನ್ನು ಪ್ರೀತಿಯಿಂದ ಅಭಿನಂದಿಸಿ ಇನ್ನು ಹೆಚ್ಚು ಪುಸ್ತಕಗಳು ಅವರ ಲೇಖನಿಯಿಂದ ಹೊರಹೊಮ್ಮಲಿ ಎಂದು ಆಶಿಸುತ್ತಾ ಈ ಪುಸ್ತಕಕ್ಕೆ ತಮಗೆ ಮುನ್ನುಡಿ ಬರೆಯುವ ಸದಾವಕಾಶ ದೊರೆತಿದ್ದಕ್ಕೆ ಹರ್ಷ ವ್ಯಕ್ತಪಡಿಸಿದರು.

ಪುಸ್ತಕದ ಕರ್ತೃಗಳಾದ ಶ್ರೀ ಪುತ್ತೂರು ಅನಂತರಾಜ ಗೌಡರು ಮಾತನಾಡುತ್ತಾ ದಕ್ಷಿಣ ಕನ್ನಡ ಭಾಗದ ಒಕ್ಕಲಿಗರ ಬಗ್ಗೆ ಬಹಳ ಹಿಂದೆ ಡಾ. ಪುರುಷೋತ್ತಮ ಬಿಳಿಮಲೆಯವರೊಂದಿಗೆ ಚರ್ಚಿಸಿದಾಗ ನಮ್ಮ ಯೋಚನೆಗಳಿಗೆ ಬಲತುಂಬಿ ಈ ಬಗ್ಗೆ ಪುಸ್ತಕ ಹೊರತರಲು ಪ್ರೇರೇಪಿಸಿದರು. ಆ ಕಾರಣದಿಂದಲೇ ಇಂದು ಈ ಪುಸ್ತಕ ಇಲ್ಲಿ ಬಿಡುಗಡೆಯಾಗಲು ಸಾಧ್ಯವಾಯಿತು ಎಂಬ ವಿಚಾರವನ್ನು ಹಂಚಿಕೊಂಡರು. ಈ ಪುಸ್ತಕ ಹೊರತರುವಲ್ಲಿ ಅವರು ಕೈಗೊಂಡ ಪ್ರವಾಸ, ಯೋಜನೆ, ಭೇಟಿ ಮಾಡಿದ ಸ್ಥಳಗಳು, ಸಂದರ್ಶಿಸಿದ ಜನ, ಅವರ ಪರಂಪರೆ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳು, ಕಸುಬು ಮುಂತಾದ ವಿಷಯಗಳನ್ನು ಕಲೆಹಾಕುವಲ್ಲಿ ಮಾಡಿದ ಸಾಹಸ ಮತ್ತು ತಮ್ಮ ಸಮುದಾಯದ ಬೇರುಗಳನ್ನು ಉಳಿಸಿಕೊಳ್ಳು ಮಾಡಿದ ಸಂಘರ್ಷ ಇತ್ಯಾದಿ ವಿಚಾರಗಳ ಬಗ್ಗೆ ತಮ್ಮ ಅನುಭವಗಳನ್ನು ಸವಿವರವಾಗಿ ಹಂಚಿಕೊಂಡರು. ದೆಹಲಿ ಒಕ್ಕಲಿಗ ಗೌಡ ಸಂಘದ ಸಹಯೋಗದೊಂದಿಗೆ ತಮ್ಮ ಪುಸ್ತಕ ಬಿಡುಗಡೆಗೊಳ್ಳುತ್ತಿರುವುದಕ್ಕೆ ಸಂತೋಷ ವ್ಯಕ್ತ ಪಡಿಸುತ್ತಾ ಧನ್ಯವಾದಗಳನ್ನು ಅರ್ಪಿಸಿದರು.

ಇನ್ ಪರ್ಸ್ಯೂಟ್ ಆಫ್ ಅವರ್ ರೂಟ್ ಪುಸ್ತಕದ ಕರ್ತೃಗಳಾದ ಶ್ರೀ ಪುತ್ತೂರು ಅನಂತರಾಜ ಗೌಡರನ್ನು ಸಮಾರಂಭದಲ್ಲಿ ಉಪಸ್ಥಿತರಿದ್ದ ಗಣ್ಯರು ಮೈಸೂರು ಪೇಟ, ಶಾಲು, ಫಲಪುಷ್ಪ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದ ಸ್ಮರಣಿಕೆಯನ್ನು ನೀಡುವುದರ ಮೂಲಕ ಅಭಿನಂದಿಸಿದರು.

ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಸ್. ಸೋಮಶೇಖರ್ ಅವರು ಸಮಾರಂಭಕ್ಕೆ ಗಣ್ಯರನ್ನು ಪುಷ್ಪಗುಚ್ಛ ನೀಡುವುದರ ಮೂಲಕ ಸ್ವಾಗತಿಸಿದರು. ಕು. ನಂದಿನಿ ಅವರು 2014 ನೇ ಸಾಲಿನಲ್ಲಿ ಐ.ಎ.ಎಸ್ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಪಡೆಯುವುದರ ಮೂಲಕ ಸಮುದಾಯದ ಹಿರಿಮೆಯನ್ನು ಹೆಚ್ಚಿಸಿರುವ ಸಲುವಾಗಿ ಅವರಿಗೂ ಹೂಗುಚ್ಛ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಹಿರಿಯ ಐ.ಪಿ.ಎಸ್ ಅಧಿಕಾರಿಯಾದ ಶ್ರೀ ರಾಜ್‌ಶೇಖರ್ ಅವರನ್ನೂ ಸಹ ಹೂ ಗುಚ್ಛ ನೀಡುವ ಮೂಲಕ ಸ್ವಾಗತಿಸಲಾಯಿತು.

ಆರಂಭದಲ್ಲಿ ಕು. ಪ್ರೇರಣಾ ರಾವ್ ಮತ್ತು ಶ್ರೀಮತಿ ಪೂಜಾ ರಾವ್ ಅವರು ದ.ರಾ. ಬೇಂದ್ರೆ ಅವರ "ಬಾರೋ ಸಾಧನ ಕೇರಿಗೆ" ಎಂಬ ಭಾವಗೀತೆಯನ್ನು ಶ್ರೀ ಸುಧೀರ್ ಫಡ್ನೀಸ್ ಅವರ ಸಂಗೀತದೊಂದಿಗೆ ಸುಶ್ರಾವ್ಯವಾಗಿ ಹಾಡುವ ಮೂಲಕ ಕಾರ್ಯಕ್ರಮವು ಪ್ರಾರಂಭವಾಯಿತು. ಡಾ. ವಿ.ಆರ್. ಗುಡ್ಡೇಗೌಡರು ಉಪಸ್ಥಿತರಿದ್ದ ಗಣ್ಯರು, ಸಭಿಕರಿಗೆಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು. ದೆಹಲಿ ಒಕ್ಕಲಿಗ ಗೌಡ ಸಂಘದ ಕಾರ್ಯದರ್ಶಿಗಳಾದ ಶ್ರೀ ಪಿ.ಸಿ ಶ್ರೀನಿವಾಸ್ ಅವರು ಕಾರ್ಯಕ್ರಮ ನಿರೂಪಿಸಿದರು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಭೋಜನ ವ್ಯವಸ್ಥೆ ಏರ್ಪಡಿಸಲಾಗಿತ್ತು.

*ಪಿ.ಸಿ ಶ್ರೀನಿವಾಸ್*

# ಮದುವೆ ತಪ್ಪು ನಿರ್ಧಾರ ಬೇಡ– ಯುವತಿಯರಿಗೆ ಕಿವಿಮಾತು

ವಿವಾಹ ಪ್ರತಿಯೊಬ್ಬರ ಜೀವನದಲ್ಲೂ ನಡೆಯುವ ಅತ್ಯಂತ ಸುಂದರವಾದ ತಿರುವು. ಇದೊಂದು ಸುಂದರ ಉತ್ಸವ. ಒಂದು ಗಂಡು ಮತ್ತು ಹೆಣ್ಣು ಜೀವನಪೂರ್ತಿ ಜೊತೆಯಾಗಿ ಸಾಗಲು ನಿರ್ಧಾರ ಕೈಗೊಳ್ಳುತ್ತಾ ಒಟ್ಟಿಗೆ ಬಾಳುವುದಕ್ಕಾಗಿ ಸಮಾಜದಿಂದ ಅನುಮತಿ ಪಡೆದುಕೊಳ್ಳುವ ಶುಭ ಸಮಾರಂಭ. ಇಲ್ಲಿ ಇಬ್ಬರು ಮಾತ್ರವೇ ಸೇರುವುದಿಲ್ಲ. ಎರಡು ಕುಟುಂಬಗಳು ಒಂದಾಗುತ್ತವೆ. ಹೊಸ ಸಂಬಂಧಗಳು ಬೆಳೆಯುತ್ತವೆ. ಪ್ರೀತಿಯೇ ಇದಕ್ಕೆ ತಳಹದಿ. ಅನ್ಯೋನ್ಯತೆಯೇ ಇದಕ್ಕೆ ಟಾನಿಕ್ಕು. ಆದರೆ ಕಾಲ ಕ್ರಮೇಣ ಮದುವೆ ಎನ್ನುವುದು ಬಿಸಿನೆಸ್ ಆಗಿದೆ. ಸುಮಧುರ ಸಂಬಂಧಗಳ ಸವಿಯನ್ನು ಅನುಭವಿಸುವುದಕ್ಕೆ ಬದಲಾಗಿ ಕೊಡು–ತೆಗೆದುಕೊಳ್ಳುವ ವ್ಯವಹಾರಗಳೇ ಹೆಚ್ಚಾಗಿವೆ. ಸ್ವಾರ್ಥ ಅತಿಯಾಸೆ ಹಾಗೂ ನಾನೇ ಮೇಲು ಎಂಬ ಸಲ್ಲದ ಭ್ರಮೆಯಿಂದಾಗಿ ಇತ್ತೀಚೆಗೆ  ಮದುವೆಗಳು ಹೆಚ್ಚಾಗಿ ಕುಸಿದು ಹೋಗುತ್ತಿವೆ. ಆದ್ದರಿಂದ ಹೊಸತಾಗಿ ವಿವಾಹವಾಗುತ್ತಿರುವ ಅಥವಾ ಮಂದಿನ ವರ್ಷದಲ್ಲಿ ವಿವಾಹವಾಗಲಿರುವ ಯುವತಿಯರಿಗೆ ನಾನು ಕೆಲವೊಂದು ಸಲಹೆಗಳನ್ನು ನೀಡಲು ಬಯಸುತ್ತೇನೆ. ಜೀವನ ಪೂರ್ತಿ ಕನ್ಯೆಯಾಗಿ ಉಳಿದರೂ ಪರವಾಗಿಲ್ಲ, ತಪ್ಪು ನಿರ್ಧಾರ ಖಂಡಿತಾ ಬೇಡ. ಇದಕ್ಕೆ ಮುಂಚೆ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಮದುವೆ ಉದಾಹರಣೆ ನೀಡಲು ಬಯಸುತ್ತೇನೆ. ಎರಡೂ ಕೂಡಾ ಹವ್ಯಕ ಬ್ರಾಹ್ಮಣರ ವಿವಾಹ.

***ವಿವಾಹ 1***

ಲಕ್ಷಗಟ್ಟಲೆ ಖರ್ಚು ಮಾಡಿ ಮದುವೆ ನಡೆಯಿತು. ನೆಂಟರಿಷ್ಟರು ಎಂಬಂತೆ ಸುಮಾರು 1500 ಕ್ಕೂ ಮೀರಿ ಜನರು ಬಂದು ವಧೂವರರನ್ನು ಅಕ್ಷತೆ ಕಾಳು ಹಾಕಿ ಆಶೀರ್ವದಿಸಿದರು. ಹೋಳಿಗೆ ಪಾಯಸದ ಊಟ ಮಾಡಿ ನಕ್ಕುನಲಿದು ಹೊರಟು ಹೋದರು. ಗಂಡನ ಮನೆಗೆ ಹೋದ ಹೆಣ್ಣು ಒಂದೇ ವಾರದಲ್ಲಿ ತಾಯಿ ಮನೆಗೆ ವಾಪಸ್. "ನನಗೆ ಅವ ಬೇಡ. ಅವನ ಜೊತೆ ಬಾಳುವುದಿಲ್ಲ" ಎಂದು ಕಣ್ಣೀರು ಹಾಕುತ್ತಾ ಹುಡುಗಿ ಅಮ್ಮನಲ್ಲಿ ಹೇಳುತ್ತಾಳೆ. ಕಾರಣ: ಹುಡುಗ ಡ್ರಗ್ ಅಡಿಕ್ಟ್ ಮತ್ತು ಪುರುಷತ್ವವಿಲ್ಲ. ಹುಡುಗಿಗೆ ಮೊದಲ ರಾತ್ರಿಯೇ ಸಂದೇಹ ಬಂದಿತ್ತು. ಮಾರನೆಯ ದಿನ ಅತ್ತೆಯವರಲ್ಲಿ "ಅವರೇಕೆ ಒಂದು ಥರಾ ಇದ್ದಾರೆ?" ಎಂದು ಕೇಳೀದಾಗ "ಹೋಗ್ಲಿ ಬಿಡು, ಸ್ವಲ್ಪ ದಿನ ಆದ ಮೇಲೆ ಸರಿಯಾಗುತ್ತದೆ" ಎಂದರು. ಆದರೆ 2–3 ದಿನಗಳಲ್ಲಿ ಆಕೆಗೆ ಎಲ್ಲವೂ ಗೊತ್ತಾಯಿತು. ಮಲಗುವುದಕ್ಕೆ ಮುಂಚೆ ಔಷಧಿ ತೆಗೆದುಕೊಳ್ಳುತ್ತೇನೆ ಅಂತ ಏನನ್ನೋ ತೆಗೆದುಕೊಳ್ಳುತ್ತಿದ್ದ. ಸ್ವಲ್ಪ ಹೊತ್ತಿನಲ್ಲಿ ಪೂರ್ತಿ ಅಮಲೇರಿ ಬಿದ್ದು ಮಲಗುತ್ತಿದ್ದ. ಈತ ಮಾದಕ ಪದಾರ್ಥ ಸೇವಿಸುತ್ತಿದ್ದ ಅಂತ ಗೊತ್ತಾಯಿತು. ಅವರಿವರಲ್ಲಿ, ಅಕ್ಕ–ಪಕ್ಕದವರಲ್ಲಿ ಕೇಳಿದಾಗ ಇನ್ನಷ್ಟು ವಿಚಾರಗಳು ಬೆಳಕಿಗೆ ಬಂದವು. ಹುಡುಗನ ತಂದೆ ತಾಯಿಗಳಿಗೆ ಇದು ಚೆನ್ನಾಗಿ ಗೊತ್ತಿತ್ತು. ಎಲ್ಲಾ ವಿಚಾರ ಮುಚ್ಚಿಟ್ಟಿದ್ದರು. ಈಗ ಈಕೆ ಯಥಾ ಪ್ರಕಾರ ಬೆಂಗಳೂರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾಳೆ. ನಾಳೆ ಏನೇ ಆದರೂ ವಿಚ್ಛೇದಿತೆ ಎಂಬ ಹಣೆ ಪಟ್ಟಿ ಬಿತ್ತೇ ಬಿತ್ತಲ್ಲ. ಪಾಪ! ಏನೂ ತಪ್ಪು ಮಾಡದ ಆಕೆಗೆ ಎಷ್ಟು ದೊಡ್ಡ ಶಿಕ್ಷೆ?

ಹುಡುಗನ ತಂದೆ ತಾಯಿಗಳು ಈ ವಿಚಾರ



ಮುಚ್ಚಿಟ್ಟು ಅತಿ ದೊಡ್ಡ ಅಪರಾಧ ಮಾಡಿದ್ದರು. ಒಂದು ಹೆಣ್ಣಿನ ಬಾಳಿನಲ್ಲಿ ಆಟವಾಡಲು ಅವರು ಯಾರು? ಕನಿಷ್ಠ ಪಕ್ಷ ಅವರ ಹಿತೈಷಿಗಳಾದರೂ ಬುದ್ಧಿ ಹೇಳಬೇಕಿತ್ತು. ಇತ್ತ ಹೆಣ್ಣಿನ ಕಡೆಯವರು ಕೂಡಾ ಇನ್ನೂ ಹೆಚ್ಚಾಗಿ ತಪಾಸಣೆ ಮಾಡಬೇಕಿತ್ತು. ಈಗ ಸಮಾಜ ನೋಡಿರುವಂತೆ ಒಂದು ಮದುವೆ ಆಗಿದೆ. ಡೈವೋರ್ಸ್, ಸೆಕೆಂಡ್ ಮ್ಯಾರೇಜ್ ಎಲ್ಲಾ ಇದೆ. ಆದರೆ, ಜೀವನದ ಹಾದಿ ಎಷ್ಟು ಸುಸೂತ್ರ ಎಂಬ ಗ್ಯಾರಂಟಿಯಿಲ್ಲ.

ಈಗ ಎರಡನೇ ಉದಾಹರಣೆ: 10 ವರ್ಷ ಹಿಂದಿನ ಮದುವೆ. ಹುಡುಗನ ಮನೆಯವರಿಗೆ ಹಣದಾಸೆ ಹೆಚ್ಚು. ವರದಕ್ಷಿಣೆ ಹೆಚ್ಚು ಸಿಗಲಿಲ್ಲ. ಹುಡುಗಿ ನೋಡುವುದಕ್ಕೆ ಸುಂದರವಾಗಿದ್ದಳು. ಹಣ ಗಳಿಸುವುದಕ್ಕೆ ಗಂಡನಲ್ಲಿ ಹೊಸ ಉಪಾಯ ಮೂಡಿತು. ಅಶ್ಲೀಲ ಚಲನಚಿತ್ರ (ಬ್ಲೂ ಫಿಲಂ) ಮಾಡುವ ಪ್ಲಾನ್ ಮತ್ತು ಅದರಲ್ಲಿ ನಟಿಸಬೇಕೆಂದು ಹೆಂಡತಿಯ ಮೇಲೆ ಒತ್ತಾಯ. ಅವಳು ಒಪ್ಪಲಿಲ್ಲ. ಸುಂದರ ಜೀವನದ ಕನಸನ್ನು ಕಾಣುತ್ತಾ ಗಂಡನ ಆಶ್ರಯ ಸೇರಿರುವ ಹೆಂಡತಿಗೆ ಎಂಥಾ ಆಘಾತ! ಮತ್ತೆ ಮತ್ತೆ ಕಾಡಿಸಿದರು, ಪೀಡಿಸಿದರು. ತನ್ನ ಮಾನ ಹಾಗೂ ಪ್ರಾಣವನ್ನು ಕಾಪಾಡುವುದಕ್ಕಾಗಿ ಗಂಡನ ಮನೆಯಿಂದ ಓಡಿ ತಂದೆ ಮನೆಗೆ ಬಂದಳು. ಜೊತೆಯಲ್ಲಿ ಒಂದು ಮಗು ಕೂಡಾ ಇದೆ.

ತಪ್ಪು ಯಾರದ್ದು? ಎರಡೂ ಉದಾಹರಣೆಗಳಲ್ಲಿ ವಧು ನಿರಪರಾಧಿ. ಯಾರದ್ದೋ ಮಿಸ್ಟೇಕ್‌ನಿಂದಾಗಿ, ತಪ್ಪು ನಿರ್ಧಾರಗಳಿಂದಾಗಿ ನೋವು ಅನುಭವಿಸುತ್ತಿದ್ದಾರೆ. ಕಳೆದು ಹೋದ ಸಮಯ ಮತ್ತೆ ಬರುವುದೇ? ಸುಂದರ ಬಾಳಿನ ಕನಸು ಕಾಣುತ್ತಾ, ಏನೇನೋ ಅಪೇಕ್ಷೆಗಳಿಂದ ಗಂಡನ ಮನೆಗೆ ತೆರಳಿದ ಹೆಣ್ಣಿಗೆ ಇಷ್ಟು ದೊಡ್ಡ ಶಿಕ್ಷೆಯೇ?

ಇದು ಕೇವಲ ಎರಡು ಉದಾಹರಣೆಗಳು ಮಾತ್ರ. ಇಂತಹ ಎಷ್ಟೋ ಪ್ರಸಂಗಗಳು ಹಲವಾರು ವರ್ಷಗಳಿಂದ ನಡೆಯುತ್ತಾ ಬಂದಿದೆ. ವಿದ್ಯಾವಂತ ಯುವತಿಯಾಗಿ ಪಟ್ಟಣ ಸೇರುತ್ತಾ ಒಳ್ಳೆಯ ಉದ್ಯೋಗ ಹಿಡಿದು ಆರ್ಥಿಕವಾಗಿ ಪ್ರಬಲರಾಗಬಹದು ಹಾಗೂ ಮುಂದೆ ಎರಡನೇ ವಿವಾಹ ಸಂದರ್ಭದಲ್ಲಿ ಎಚ್ಚೆತ್ತುಕೊಂಡು ಸರಿಯಾದ ಹೆಜ್ಜೆ ಇರಿಸಬಹುದು. ಒಂದು ವೇಳೆ ಆಕೆ ವಿದ್ಯಾವಂತೆಯಾಗಿಲ್ಲದಿದ್ದಲ್ಲಿ, ಅಥವಾ ಹೆಚ್ಚು ಓದಿಲ್ಲವಾದಲ್ಲಿ, ಏನು ಮಾಡುವುದು? ಎಲ್ಲಿಗೆ ಹೋಗುವುದು? ಗಂಡನ ಮನೆಯ ಹಿಂಸೆ ತಾಳಲಾರದೆ ತಂದೆ ತಾಯಿಗಳು ಇದ್ದಲ್ಲಿಗೆ ಬರಬೇಕು. ಅಲ್ಲಿ ಸ್ವಲ್ಪ ದಿನ ಓಕೆ. ಆಮೇಲೆ ಮಗಳು ಮನೆಯವರಿಗೆ ಹೊರೆಯಾಗುತ್ತಾಳೆ. ಎರಡನೇ ವಿವಾಹಕ್ಕೆ ಪ್ರಯತ್ನಿಸಿದಲ್ಲಿ ಎರಡು ಮದುವೆ ಆಗಿರುವ, ಆರು ಮಕ್ಕಳಿರುವ ಅಥವಾ ಮಕ್ಕಳಿಲ್ಲದ ವೃದ್ಧರೋ, ರೋಗಿಷ್ಟರೋ ಇನ್ಯಾರೋ ಬರುತ್ತಾರೆ. ಅವರೊಂದಿಗೆ ಜೀವನ ಸರಿಯಿರುತ್ತದೆ ಎಂದು ಗ್ಯಾರಂಟಿ? ಆದ್ದರಿಂದ, ವ್ಯಾಪಾರವಾಗಿ ಪರಿವರ್ತನೆಗೊಂಡಿರವ ಮದುವೆ ಎಂಬ ಜಾಲದಲ್ಲಿ ಸಿಕ್ಕಿ ಬೀಳುವುದಕ್ಕೆ ಮುಂಚೆ ಯುವತಿಯರು ಸಾಕಷ್ಟು ಎಚ್ಚರಿಕೆ ವಹಿಸಬೇಕು.

***ಪರಿಚಯದ ಕುಟುಂಬದೊಂದಿಗೆ ಸಂಬಂಧ ಬೆಳೆಸಿ:***

ನಾವು ಹುಟ್ಟಿನಿಂದ ಬೆಳೆದು ದೊಡ್ಡದಾಗುವ ತನಕ ನಮ್ಮ ನೆಂಟರಿಷ್ಟರಲ್ಲಿ, ನೆರೆಹೊರೆಯಲ್ಲಿ ಎಷ್ಟೋ ಜನರ ಪರಿಚಯ ನಮಗಿರುತ್ತದೆ. ಅಂತಹ ಹುಡುಗ–ಹುಡುಗಿಯರು ಒಬ್ಬರಿಗೊಬ್ಬರು ಚೆನ್ನಾಗಿ ಪರಿಚಯ ಇರುತದೆ, ಚೆನ್ನಾಗಿ ಗೊತ್ತಿರುತ್ತದೆ. ಯೋಗ್ಯ ಗುಣ ನಡತೆ ಹೊಂದಿರುವ ಜೊತೆ ಕೂಡಿ ಬಂದಲ್ಲಿ ವಿವಾಹ ಮಾಡಿಸಬಹುದು. ಏಕೆಂದರೆ ಪರಿಚಯಸ್ಥರಾಗಿರುವ ಕಾರಣ ವಿಶ್ವಾಸ ಬೆಳೆಯುತ್ತದೆ. ಇದಕ್ಕಾಗಿ ಅಂತಸ್ತು, ಜಾತಿ–ನೀತಿ ನೋಡಬೇಡಿ. ಪತ್ರಿಕೆ ಜಾಹಿರಾತುಗಳನ್ನು ಮತ್ತೆ ನೋಡಿ, ದೂರದಲ್ಲಿರುವ ಯಾರನ್ನೋ ಮದುವೆಯಾಗುವುದಕ್ಕಿಂತ ಇದು ಒಳ್ಳೆಯದಲ್ಲವೇ?

***ವಿವಾಹಕ್ಕಾಗಿ ಅವಸರ ಬೇಡ:***

ಸಾಕಷ್ಟು ಪರಾಮರ್ಶೆ ಮಾಡಿದ ಬಳಿಕವೇ ಅಂತಿಮ ನಿರ್ಧಾರಕ್ಕೆ ಬನ್ನಿ. ಹೆಚ್ಚಿನ ತಂದೆ ತಾಯಿಗಳಿಗೆ ಮಗಳು ಪ್ರಾಯಕ್ಕೆ ಬಂದಳು ಎಂದ ತಕ್ಷಣವೇ ಮೊದಲು ಅವಳನ್ನು ದಾಟಿಸಿದರೆ ಸಾಕು ಎಂಬ ತೀರ್ಮಾನಕ್ಕೆ ಬರುತ್ತಾರೆ. ಮಗಳ ಭವಿಷ್ಯ ಉಜ್ವಲವಾಗಬೇಕು ಎನ್ನುವುದು ಅವರಿಗೆ ಮೊದಲನೇ ಆದ್ಯತೆಯಲ್ಲ. ಯಾವುದೋ ದೊಡ್ಡ ಸಂಬಂಧ ಬಂತು ಎಂದ ತಕ್ಷಣ ವಿದ್ಯಾಭ್ಯಾಸ ಅರ್ಧದಲ್ಲಿ ನಿಲ್ಲಿಸಿ, ನೌಕರಿಯಲ್ಲಿದ್ದರೆ ಕೆಲಸ ಬಿಡಿಸಿ ಮದುವೆ ಮಾಡಿಸುತ್ತಾರೆ. ಅವಳಿಗೆ ಮದುವೆ ಇಷ್ಟ ಇದೆಯೋ ಇಲ್ಲವೋ ಎನ್ನುವುದು ಬೇಕಿಲ್ಲ. ತನ್ನ ಹೊರೆ ಇಳಿಸಿ ಕೈ ತೊಳೆದುಕೊಂಡರೆ ಸಾಕು ಎನ್ನುವಂತೆ ಇರುತ್ತಾರೆ ತಂದೆ ತಾಯಿಗಳು. ಮುರಿದು ಬಿದ್ದಿರುವ ಎಷ್ಟೋ ವಿವಾಹಗಳ ಹಿಂದಿನ ಸಂದರ್ಭವನ್ನು ಮತ್ತೊಮ್ಮೆ ರಿವೈಂಡ್ ಮಾಡಿ ನೋಡಿ. ನಮ್ಮ ತಪ್ಪುಗಳು ಎದ್ದು ಕಾಣುತ್ತವೆ. ಗಂಡು ಮಕ್ಕಳು ನಮ್ಮ ಮನೆಯಲ್ಲೇ ಇರುತ್ತಾರೆ. ಹೇಗಾದರೂ ಎಡ್ಜಸ್ಟ್ ಮಾಡುತ್ತಾರೆ. ಹೆಣ್ಣು ಮಕ್ಕಳು ಇನ್ನೊಂದು ಮನೆಯ ದೀಪ ಬೆಳಗಿಸುತ್ತಾರೆ. ಅವಳಿಗೂ ಸುರಕ್ಷೆ ಸಿಗಬೇಕು. ಹೋದ ಮನೆಯಲ್ಲಿ ಮಗಳು ಎಲ್ಲರ ಮೆಚ್ಚುಗೆಗೆ/ಒಲವಿಗೆ ಪಾತ್ರಳಾಗಬೇಕು. ಈ ರೀತಿಯಲ್ಲಿ ಮಗಳನ್ನು ತಯಾರು ಮಾಡಬೇಕು ಮತ್ತು ಬಳಿಕ ನಿಧಾನವಾಗಿ ಪ್ರಯತ್ನ ಮುಂದುವರಿಸಬೇಕು.

***ಮೊದಲನೇ ಒಂದು ವರ್ಷ ಮಗು ಬೇಡ:***

ಮದುವೆ ಆಗುವ ಯುವತಿಯರು ತಮ್ಮ ಮೊದಲನೇ ವರ್ಷದಲ್ಲಿ ಮಗು ಬೇಡ ಎಂದು ಗಂಡನನ್ನು ಮತ್ತು ಆತನ ಮನೆಯವರನ್ನು ಒಲಿಸಬೇಕು. ಏಕೆಂದರೆ, ಒಂದು ವರ್ಷ ಎಲ್ಲರೂ ಒಬ್ಬರನ್ನೊಬ್ಬರು ಪರಸ್ಪರ ಚೆನ್ನಾಗಿ ಅರಿತುಕೊಳ್ಳುತ್ತಾರೆ. ಒಂದು ವರ್ಷದಿಂದ ಅನ್ಯೋನ್ಯತೆಯಿಂದ, ಪ್ರೀತಿಯಿಂದ ಎಲ್ಲರೂ ಸರಿಯಾದಲ್ಲಿ ಜೀವನ ಸುರಕ್ಷಿತ ಹಾಗೂ ಮುಂದೆಯೂ ಕೂಡಾ ಸರಿಯಾಗಿರುತ್ತದೆ. ಆಮೇಲೆ ಮಕ್ಕಳು–ಸಂಸಾರ ಬೆಳೆಯುಬಹದು. ಒಂದು ವರ್ಷದೊಳಗೆ ಮಗು ಆಗಿ ಬ್ರೇಕ್ ಆದಲ್ಲಿ, ಮುಂದೆ ತುಂಬಾ ಕಷ್ಟವಾಗುತ್ತದೆ. ಮಗು ಹೆಚ್ಚುವರಿ ಹೊರೆಯಾಗುತ್ತದೆ.

***ಮದುವೆಗೋಸ್ಕರ ನಿಮ್ಮ ನೌಕರಿ ಮತ್ತು ಜೀವನದ ಗುರಿಯನ್ನು ಕೈ ಬಿಡಬೇಡಿ:***

ಇಂದು ವಿದ್ಯೆಯಲ್ಲಿ ಮಹಿಳೆಯರು ಮುಂದಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿಭಾವಂತರಾಗಿ ಮುಂದುವರಿದಿದ್ದಾರೆ. ಇಂತಹ ಪ್ರತಿಭೆಗಳಿಂದ ಸಮಾಜದಲ್ಲಿ ಹೊಸ ಉನ್ನತಿಗಳಾಗಿವೆ, ಬೆಳವಣಿಗೆಗಳಾಗಿವೆ. ಟಿವಿಯಲ್ಲಿ ನ್ಯೂಸ್ ಓದುತ್ತಿರುವ ಮಹಿಳೆಯರು, ಅಧ್ಯಾಪಕಿಯರು, ಮಹಿಳಾ ಡಾಕ್ಟರರು, ವಕೀಲರು ಎಂಬಂತೆ ಬೇರೆ ಬೇರೆ ಕೇತ್ರಗಳಲ್ಲಿ ಇಂದು ಅವರ ಪ್ರಭಾವವಿದೆ. ನಿಮ್ಮಲ್ಲಿರುವ ಪ್ರತಿಭೆಗಳನ್ನು ಬೆಳಗಿಸಲು ಅಥವಾ ನೀವು ಇಷ್ಟ ಪಡುವ ಸಾಧನೆಯನ್ನು ಮಾಡುತ್ತಾ ಒಂದು ಹಂತಕ್ಕೆ ಬನ್ನಿ. ಬಳಿಕ ಮದುವೆ ನಿರ್ಧಾರವಿರಲಿ. ಕೇವಲ ಅಡುಗೆ ಮನೆಯಲ್ಲೇ ಜೀವನ ಮುಗಿದು ಹೋಗುವ ಲೈಫ್ ಬೇಡ. ನಿಮ್ಮ ಯೋಗ್ಯತೆಯನ್ನು ತೋರಿಸುವ ರೀತಿಯಲ್ಲಿ ವಿವಾಹವನ್ನು ಪ್ಲಾನ್ ಮಾಡಿ.

***ಪಟ್ಟಣದಲ್ಲಿ ಮಾತ್ರವೇ ಸುಖವಿದೆ ಎಂಬ ಭ್ರಮೆ ಬೇಡ:***

"ಹಳ್ಳಿಯಾದರೇನು ಶಿವಾ, ಡೆಲ್ಲಿಯಾದರೇನು ಶಿವಾ ಜಗವೆಲ್ಲ ಒಂದೇ ಶಿವಾ"–ಆದ್ದರಿಂದ ಬೆಂಗಳೂರಿನಲ್ಲಿ ನೌಕರಿಯಿರುವ ಗಂಡ ಸಿಕ್ಕಿದರೆ ಮಾತ್ರವೇ ಜೀವನ ಸಂತೋಷವಾಗಿರುತ್ತದೆ ಎಂಬ ಭ್ರಮೆ ಬೇಡ. ಒಳ್ಳೆಯದ್ದು ಕೆಟ್ಟದ್ದು ಎಲ್ಲಾ ಕಡೆಯಲ್ಲೂ ಇದೆ. ಇಂದು ಹಳ್ಳಿಗಳು ಹಳ್ಳಿಯಾಗಿ ಉಳಿದಿಲ್ಲ. ಪಟ್ಟಣದ ಎಲ್ಲಾ ಸೌಕರ್ಯಗಳು ಹಳ್ಳಿಯಲ್ಲಿದೆ. ನೆಟ್ ಇದೆ, ಫೇಸ್‌ಬುಕ್ ಇದೆ, ಡಿಟಿಎಚ್ ಮೂಲಕ ಎಲ್ಲಾ ಚ್ಯಾನೆಲ್ಲುಗಳು ಸಿಗುತ್ತವೆ. ಯೂ ಟ್ಯೂಬ್ ಇದೆ. ಇಷ್ಟು ಮಾತ್ರವಲ್ಲದೆ, ಸಮೀಪದ ದೊಡ್ಡ ಪೇಟೆಗೆ ಉತ್ತಮ ವಾಹನ ಸಂಪರ್ಕ ಕೂಡಾ ಇದೆ. ಹಾಗಾಗಿ ಹಳ್ಳಿಯಲ್ಲಿದ್ದರೂ ಕೂಡಾ ಸುಖವಾಗಿ ಬಾಳಬಹುದು. ಇದಲ್ಲದೆ ಒಳ್ಳೆಯ ಗಾಳಿ, ನೀರು, ತರಕಾರಿಗಳನ್ನು ಹಳ್ಳಿಯಲ್ಲಿ ಪಡೆಯಬಹುದಾಗಿದೆ. ಹಾಗಾಗಿ ಒಳ್ಳೆಯ ಗಂಡ ಸಿಕ್ಕಿದರೆ ಸಾಕು. ಹಳ್ಳಿಯಲ್ಲೂ ಉತ್ತಮ ಜೀವನವಿದೆ.

***ಒಂದು ಒಳ್ಳೆಯ ಸಮಾಜವನ್ನು ನಿರ್ಮಿಸುವುದಕ್ಕಾಗಿ***

ಸಮಾಜದಲ್ಲಿರುವ ಸದಸ್ಯರು ನೆಮ್ಮದಿಯಿಂದ ಬಾಳುವುದು ಅಗತ್ಯವಾಗಿದೆ. ಶಾಂತಿ–ನೆಮ್ಮದಿಯಿಂದ ಬಾಳುವುದಕ್ಕಾಗಿ ಗಂಡ–ಹೆಂಡತಿ ಸಂಬಂಧಗಳು ಉತ್ತಮವಾಗಿದ್ದರೆ ಮಾತ್ರವೇ ಸಾಧ್ಯವಿದೆ. ಇದಕ್ಕಾಗಿ ಸಂಗಾತಿಯ ಆಯ್ಕೆ, ಸಂಬಂಧಗಳ ಆಯ್ಕೆ ಅತ್ಯಂತ ಪ್ರಾಮುಖ್ಯವಾಗಿದೆ. ಇದಕ್ಕಾಗಿ ಮನೆಯವರೆಲ್ಲರೂ ಯೋಚಿಸಬೇಕು. ಸಮಾಜ ಸೇವಾ ಸಂಸ್ಥೆಗಳು ಇಂತಹ ಸಾಮಾಜಿಕ ವಿಚಾರ ಕುರಿತಂತೆ ಚರ್ಚಾ ಗೋಷ್ಠಿಗಳನ್ನು ಏರ್ಪಡಿಸಬೇಕು. ಜನರಲ್ಲಿರುವ ಪ್ರಶ್ನೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಮತ್ತು ಮಾರ್ಗದರ್ಶನಗಳನ್ನು ನೀಡಬೇಕು. ಮದುವೆ ಊಟಕ್ಕೆಂದು ನಾವೆಲ್ಲರೂ ಹೋಗುತ್ತೇವೆ. ವಧೂ–ವರರು ಸಂತೋಷದಿಂದ ಮದುವೆ ಆಗುತ್ತಿದ್ದಾರೆಯೇ, ಅಥವಾ ಎರಡೂ ಸಂಬಂಧಗಳಲ್ಲಿ ಸೌಹಾರ್ದತೆ ಇದೆಯೇ ಎಂಬುದನ್ನು ಕಂಡುಕೊಳ್ಳಬೇಕು. ಸ್ವಲ್ಪವೇ ಅನುಮಾನ ಬಂದರೂ ಸುಮ್ಮನೆ ಉಂಡು ಬರಬಾರದು. ಎಲ್ಲರೂ ಸುಖವಾಗಿ ಬಾಳುವುದಕ್ಕಾಗಿ ನಮ್ಮ ಕೊಡುಗೆಗಳನ್ನು ನೀಡೋಣ. ಜೈ ಹಿಂದ್!

(ಅಭಿಪ್ರಾಯಗಳು ಲೇಖಕರದು) ಅ

***ಎ.ವಿ. ಚಿತ್ತರಂಜನ್ ದಾಸ್***

**ತಿದ್ದುಪಡಿ**

ಕಳೆದ ಸಂಚಿಕೆಯ ಭಾವನೆಯ ಬಳ್ಳಿಯ ಮೊದಲ ಪ್ಯಾರಾದಲ್ಲಿ '5ನೇ ಸೆಪ್ಟೆಂಬರ್ 2015' ಇದ್ದನ್ನು 5ನೇ ಸೆಪ್ಟೆಂಬರ್ 2014 ಎಂದು ಓದಬೇಕು.

***ಸಂಪಾದಕರು***

## ಡಾ. ಎಂ.ಎಂ. ಕಲಬುರ್ಗಿಯವರ ನಿಧನದ ಮಾತುಗಳು

ಕೊಲ್ಲುವುದು ಧರ್ಮವಲ್ಲ
ಅಳಿಸಲು ಎಷ್ಟು ಬೇಕಾದರೂ ಮಂದಿ ಇದ್ದಾರೆ
ಉಳಿಸಿ ಬೆಳೆಸುವುದು ಬಹು ಕಠಿಣವಯ್ಯಾ
ನನ್ನ ನುಡಿ–ನಡೆ, ಉಡುಗೆ–ತೊಡುಗೆ
ಆಚಾರ–ವಿಚಾರ ಭಿನ್ನವಾಗಿರಬಹುದು
ನಿನ್ನ ನಂಬುಗೆಗಳ ವಿರುದ್ಧವಾಗಿರಬಹುದು
ಹಾಗೆಂತ ನಾನು ನಿನ್ನ ನೀನು ನನ್ನ ಮೇಲೆ
ಯಾವುದನ್ನು ಬಲವಂತವಾಗಿ ಹೇರುವ
ಅದಕೊಪ್ಪದಿರೆ ನನ್ನ ಅಳಿಸಿ ಬಿಡುವ
ಕೊಲ್ಲುವ ಧೋರಣೆ ಧರ್ಮವಲ್ಲ
ನೀನು ಹೇಳಿದ್ದಕ್ಕೆಲ್ಲಾ ಹೂಂಗುಟ್ಟಲು
ನನ್ನ ಮನಸ್ಸೊಪ್ಪುವುದಿಲ್ಲ ಏಕೆಂದರೆ
ನನ್ನ ಆತ್ಮ ನಿನ್ನಾತ್ಮಕ್ಕಿಂತ ಬೇರೆಯಾಗಿ
ಯೋಚಿಸುತ್ತದೆ ನಾನು ನಿನ್ನ ಅಡಿಯಾ
ಳಾಗಿ ದೊಗ್ಗು–ಸಲಾಮು ಹೊಡೆಯಲು
ಎಂದಿಗೂ ಸುತಾರಾಂ ಒಪ್ಪುವುದಿಲ್ಲ
ಹಾಗಂದ ಮಾತ್ರಕ್ಕೆ ನೀನು ನನ್ನ ಹತ್ಯೆ
ಮಾಡಿದರೆ ನನ್ನ ವಿಚಾರ ಸಾಯುವುದಿಲ್ಲ
ನನ್ನ ದೇಹ ನಶಿಸಿ ಹೋದೀತು
ಅಷ್ಟೇ ವಿನಃ ವಿಚಾರವಂತಿಕೆ
ಅಳಿಸಿ ಹೋಗುವುದಿಲ್ಲ ನೀವು
ಕೊಂದಿದ್ದು ನನ್ನ ವಿಚಾರತನವನಲ್ಲ
ನಿಮ್ಮ ಮಂಕುತನವನ್ನು
ಮತ್ತೆ ಮತ್ತೆ ಹುಟ್ಟಿ ಬರುತ್ತೇನೆ
ನನ್ನ ವಿಚಾರ ಮಂಡಿಸಲು ನಿಮ್ಮ
ಈ ಮೂರ್ಖತನವನ್ನು ಸರಿಪಡಿಸಲು
ಗುಂಡಿಗೆ ಇನ್ನಷ್ಟು ಗುಂಡಿಗೆ ನೀಡಲು

***ಸಖಾರಾಮ ಉಪ್ಪೂರು***

## ಸ್ವರ ಅಡಗಿಸುವವರು !

ಸ್ವರ ಅಡಗಿಸುವವರು ಹೆಚ್ಚಾಗುತ್ತಿದ್ದಾರೆ
ಎಚ್ಚರಿಕೆ ! ನಾವೀಗ ಮಾತನಾಡುವ
ಹಾಗಿಲ್ಲ. ನಮ್ಮ ಅನಿಸಿಕೆ ವಿಚಾರಗಳನ್ನು
ಬರೆದು ತಿಳಿಸುವಂತಿಲ್ಲ ಅಭಿವ್ಯಕ್ತಿ ಸ್ವಾತಂತ್ರ್ಯ
ನಮ್ಮ ಜನ್ಮ ಸಿದ್ಧ ಹಕ್ಕಿಗೇ ಕೊಡಲಿ
ಪೆಟ್ಟು. ಗುಂಡೇಟು ಬಿದ್ದಿದೆ ಇಲ್ಲಿ ಈಗ
ಪ್ರಪಂಚದ ಅತಿದೊಡ್ಡ ಪ್ರಜಾತಂತ್ರ
ಸ್ವತಂತ್ರವಾಗಿ ಮಾತನಾಡುವವರ
ಸ್ವರವನ್ನೇ ಅಡಗಿಸ ಹೊರಟಿದೆ
ಯಾವುದೇ ಅಂಕು–ಡೊಂಕು, ಕುಂದು–
ಕೊರತೆ ಅಪ್ಪಿ–ತಪ್ಪಿ, ಅಂಧ ವಿಶ್ವಾಸಗಳ
ಬಗ್ಗೆ
ಮಾತನಾಡುವ ಹಾಗಿಲ್ಲ. ಎತ್ತಿ ತೋರಿಸು
ವಂತಿಲ್ಲ ಸುಮ್ಮನೆ ಬಾಯಿ ಮುಚ್ಚಿಕೊಂಡು
ಬಿದ್ದುಕೊಂಡಿರಬೇಕು ಎಲ್ಲವನ್ನು
ಸಹಿಸಿಕೊಂಡು 'ನೀತಿ' ಪೋಲಿಸರಿದ್ದಾರೆ

ಎಚ್ಚರಿಕೆ ಹಾಸ್ಯ–ವ್ಯಂಗ್ಯ ವಿಡಂಬನೆ
ಎಲ್ಲಾ ಮರೆತು ಬಿಟ್ಟು ಹೋಗು ಸಲಾಮು
ಹಾಕಿ ಹಾಂ ನಂ ಹಾಂ ಜೋಡಿಸಿ
ಶರಣಾಗಿ ಬದುಕಿದರೆ ಮಾತ್ರ ನೀವು
ಇಲ್ಲಿ ಭೂಮಿಗೆ ಭಾರವಾಗಿ ನೆಲ
ಬಿಸಿ ಮಾಡಿಕೊಂಡಿರಬಹುದ
ಮಾತನಾಡಿದರೆ ಗುಂಡು ಹಾರಿಸಿ
ದ್ದಾರೆ ಎಚ್ಚರಿಕೆ ಸ್ವಾತಂತ್ರ ಭಾರತ
ದಲ್ಲಿ ಉಸಿರಾಡಲೂ ಅಪ್ಪಣೆ ಬೇಕು
ಈ ದೊಣ್ಣೆ ನಾಯಕರುಗಳಿಂದ

***ಸಖಾರಾಮ ಉಪ್ಪೂರು***

## ಯಕ್ಷಗಾನವನ್ನು ಕರ್ನಾಟಕದ ಪ್ರಧಾನ ಕಲೆ ಎಂದು ಘೋಷಿಸಲು

# ವಿದ್ಯಾ ಕೋಳ್ಯೂರು ಆಗ್ರಹ

ಕೇರಳ ಅಂದಾಗ ಕಥಕ್ಕಳಿ, ತಮಿಳುನಾಡು ಅಂದಾಗ ತಿರುಕ್ಕುತ್ತು, ಪಶ್ಚಿಮ ಬಂಗಾಳ ಜಾತ್ರಾ, ಹೀಗೆ ಒಂದು ಕಲೆ, ಒಂದು ರಾಜ್ಯದೊಂದಿಗೆ ಗುರುತಿಸಲಾಗುತ್ತದೆ. ರಾತ್ರಿಯಿಂದ ಬೆಳಗಿನ ತನಕ ಶುದ್ಧ ಕನ್ನಡದಲ್ಲಿ ಸಂಭಾಷಣೆ ಮಾಡುತ್ತಾ ಕನ್ನಡವನ್ನು ಉಳಿಸಿ ಬೆಳೆಸುವ, ಎಲ್ಲಾ ಕಲಾ ಪ್ರಕಾರಗಳನ್ನು ಒಳಗೊಂಡ ಸಂಪೂರ್ಣ ಕಲೆಯಾದ ಯಕ್ಷಗಾನವನ್ನು ಕರ್ನಾಟಕ ಸರಕಾರವು ಕರ್ನಾಟಕದ ಪ್ರಧಾನ ಕಲೆ ಎಂದು ಘೋಸಿಸಬೇಕು ಎಂದು ಯಕ್ಷಗಾನದ ಸುಪ್ರಸಿದ್ಧ ಆಯೋಜಕಿ ಮತ್ತು ಕಲಾವಿದೆ ಶ್ರೀಮತಿ ವಿದ್ಯಾ ಕೋಳ್ಯೂರು ಅವರು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರನ್ನು ಒತ್ತಾಯಿಸಿದರು. ಅವರು ಆಗಸ್ಟ್ 27ರಂದು ಬೆಂಗಳೂರಿನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ನೀಡುವ 'ದೇವಿ' ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಿದ್ದರು.

ಇಂಡಿಯನ್ ಎಕ್ಸ್‌ಪ್ರೆಸ್, ತನ್ನ ಸಹಸಂಸ್ಥೆ ಇವೆಂಟ್ ಎಕ್ಸ್‌ಪ್ರೆಸ್ ನ ಮೂಲಕ ಕರ್ನಾಟಕದ 10 ಮಂದಿ ಸಾಧಕಿಯರಿಗೆ 'ದೇವಿ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ಇಂಡಿಯನ್ ಎಕ್ಸ್‌ಪ್ರೆಸ್‌ನ ಚೀಫ್ ಎಡಿಟರ್ ಶ್ರೀ ಪ್ರಭು ಚಾವ್ಲಾ, ಸಚಿವರಾದ ಶ್ರೀ ಕೆ.ಜೆ. ಜಾರ್ಜ್, ಶ್ರೀ ಡಿ.ಕೆ ಶಿವಕುಮಾರ್, ಶ್ರೀಮತಿ ಮೋಟಮ್ಮ, ಶ್ರೀ ಆರ್. ಅಶೋಕ್, ವಿಧಾನ ಪರಿಷತ್ ಅಧ್ಯಕ್ಷರು, ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶ



ಶ್ರೀ ರಾಜೇಂದ್ರ ಬಾಬು, ನ್ಯಾಯಮೂರ್ತಿ ಶ್ರೀ ರಾಮಾ ಜೋಯಿಸ್, ಡಾ. ಚಂದ್ರಶೇಖರ ಕಂಬಾರ, ಮೈಸೂರು ರಾಜಮಾತೆ ಮತ್ತು ವಡೆಯರ್ ಸೇರಿದಂತೆ ಕರ್ನಾಟಕದ ವಿವಿಧ ಮಜಲುಗಳ ಗಣ್ಯರು, ಮಾಧ್ಯಮಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು, ಇಂಡಿಯನ್ ಎಕ್ಸ್‌ಪ್ರೆಸ್‌ನ ಈ ಪ್ರಯತ್ನವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಶ್ರೀಮತಿ ವಿದ್ಯಾ ಕೋಳ್ಯೂರ ಅವರ ಜೊತೆಗೆ ದೇವಿ ಪ್ರಶಸ್ತಿಯನ್ನು ಸ್ವೀಕರಿಸಿದ ವಿಶಿಷ್ಟ ಮಹಿಳೆಯರೆಂದರೆ, ಚಿತ್ರಾ ವಿಶ್ವನಾಥ್ (ವಾಸ್ತುಶಿಲ್ಪ), ಹೇಮಾಮಾಲಿನಿ ಮಯ್ಯ (ಹೋಟೆಲ್ ಉದ್ಯಮ), ಜಯಾನ ಕೊಠಾರಿ (ಮಾನವ ಹಕ್ಕುಗಳ ನ್ಯಾಯವಾದಿ), ನೇಮಿಚಂದ್ರ (ಲೇಖಕಿ ಮತ್ತು ಇಂಜಿನಿಯರ್), ರೋಹಿಣಿ ಗೋಡ್ಬೋಲೆ (ಥಿಯೋರೆಟಿಕಲ್ ಪಾರ್ಟಿಕ್ ಲ್ ಫಿಜೀಸ್ಟ್), ಆರ್ ಸುಶೀಲಾ (ಪೋಲೀಸ್ ಇನ್‌ಸ್ಪೆಕ್ಟರ್), ಶಿಲೋ ಶಿವ್ ಸುಲೇಮಾನ್ (ತಂತ್ರಜ್ಞಾನ ಕಲಾವಿದೆ), ಸುಕನ್ಯಾ ರಾಂಗೋಪಾಲ (ಘಟಂ ಕಲಾವಿದೆ), ಡಾ. ವಿಜಯಲಕ್ಷ್ಮಿ ದೇಶ್‌ಮನೆ (ಕ್ಯಾನ್ಸರ್ ಶಸ್ತ್ರಚಿಕಿತ್ಸಕರು).

ಪ್ರಾರಂಭದಲ್ಲಿ ಸ್ವಾಗತ ಮಾಡುತ್ತಾ, ಇಂಡಿಯನ್ ಎಕ್ಸ್‌ಪ್ರೆಸ್, ಹೇಗೆ ಸಾಮಾಜಪರ ಕೆಲಸಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತದೆ ಎಂಬುದನ್ನು ವಿವರಿಸಿದ ಶ್ರೀ ಪ್ರಭು ಚಾವ್ಲಾ ದೆಹಲಿ, ಹೈದರಾಬಾದ್‌ನ ನಂತರ ಇದೀಗ ಕರ್ನಾಟಕದ ಹತ್ತು ಮಂದಿ ಸಾಧಕಿಯರನ್ನು ಗುರುತಿಸಿ ಗೌರವಿಸುತ್ತಿದೆ ಎಂದು ವಿವರಿಸಿದರು. ಅನಾದಿ ಕಾಲದಿಂದಲೂ ಭಾರತೀಯ ಮಹಿಳೆ, ವಿಶ್ವಕ್ಕೆ ಮಲ್ಟೀಟಾಸ್ಕಿಂಗನ್ನು ಪ್ರಾಯೋಗಿಕವಾಗಿ ತೋರಿಸಿ ಕೊಟ್ಟಿದ್ದಾಳೆ. ಸಮಾಜ ಕಟ್ಟುವಲ್ಲಿ, ಆಕೆಯ ಪಾತ್ರ ಮಹತ್ತರವಾಗಿದೆ. ಆದರೆ ಅದನ್ನು ಗುರುತಿಸಿ ಗೌರವಿಸಬೇಕಾದ್ದು ಇಂದಿನ ಅಗತ್ಯ. ದುರ್ಗೆಯಾಗಿ, ಸೀತೆಯಾಗಿ, ದ್ರೌಪದಿಯಾಗಿ ಪುರುಷನ ಅರ್ಧಾಂಗಿಯಾಗಿ ಅಲ್ಲ, ಪ್ರಧಾನಾಂಗಿಯಾಗಿದ್ದರಿಂದಲೇ, ರಾಮ, ಸೀತಾ-ರಾಮನಾದ, ಪರಮೇಶ್ವರ ಪಾರ್ವತೀ ಪರಮೇಶ್ವರನಾದ, ವಿಷ್ಣು ಲಕ್ಷ್ಮೀ-ನರಸಿಂಹನಾದ. ಈ ಹಿನ್ನೆಲೆಯಲ್ಲಿ, ಇಂದು ದೇಶದ ಮೂಲೆ ಮೂಲೆಗಳಲ್ಲಿ, ಯಾವ ಸದ್ದು ಗದ್ದಲಗಳೂ ಇಲ್ಲದೆ, ತಮ್ಮದೇ ರೀತಿಯಲ್ಲಿ ಸಮಾಜಕ್ಕೆ ಕೊಡುಗೆ ನೀಡುತ್ತ ಸಾಧನೆ ಮಾಡುತ್ತಿರುವ ಮಹಿಳೆಯರನ್ನು 'ದೇವಿ' ಪ್ರಶಸ್ತಿ ನೀಡಿ ಗೌರವಿಸುವ ಪತ್ರಿಕೆಯ ಈ ಕಾರ್ಯ, ಪತ್ರಿಕೋದ್ಯಮದ ಹೊರತಾದ ಕೆಲಸವಾಗಿದೆ ಎಂದರು. ಅ

*ಸರವು ಕೃಷ್ಣ ಭಟ್ಟ*

---



# ಮರಾಠಿ ದೇಸಿ ಚಿಂತಕನಿಗೆ ಕುವೆಂಪು ಪ್ರಶಸ್ತಿ

ಈ ಸಾಲಿನ (2015-16) ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕೆ ಹಿರಿಯ ಮರಾಠಿ ಸಾಹಿತಿ-ಚಿಂತಕ ಪ್ರೊ. ಶ್ಯಾಮ್ ಮನೋಹರ್ ಅವರನ್ನು ಆಯ್ಕೆ ಮಾಡಲಾಗಿದೆ.

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಡಾ. ಹಂಪ ನಾಗರಾಜಯ್ಯ, ಕಾರ್ಯದರ್ಶಿ ಕಡಿದಾಳು ಪ್ರಕಾಶ್, ತೀರ್ಪುಗಾರರ ಸಮಿತಿಯ ಸದಸ್ಯರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿಯಲ್ಲಿ ಇದೇ ಆಗಸ್ಟ್ 13ರಂದು ಈ ವಿಷಯವನ್ನು ಪ್ರಕಟಿಸಿದರು. ಐದು ಲಕ್ಷ ರೂಪಾಯಿ ನಗದನ್ನು ಒಳಗೊಂಡ ಈ ಪ್ರಶಸ್ತಿಯ ವಿತರಣೆ ಕುವೆಂಪು ಅವರ ಹುಟ್ಟಿದ ದಿನವೂ ಆದ ಮುಂಬರುವ ಡಿಸೆಂಬರ್ 29ರಂದು ಕುಪ್ಪಳಿಯಲ್ಲಿ ನಡೆಯಲಿದೆ.

"ಸಮಕಾಲೀನ ಕಾಲಘಟ್ಟದಲ್ಲಿ ಭಾರತಕ್ಕೆ ದೊರೆಯುತ್ತಿರುವ ಜ್ಞಾನವು ಪಶ್ಚಿಮ ದೇಶಗಳ ಬಂಡವಾಳಶಾಹಿ ಮತ್ತು ತಂತ್ರಜ್ಞಾನದ ಚಿಂತನಕ್ರಮವನ್ನು ಆಧರಿಸಿದ್ದು, ಇಂತಹ ಜ್ಞಾನವು ಮನುಷ್ಯನ ಆತ್ಮವನ್ನು ಮತ್ತು ಸೃಜನಶೀಲತೆಯನ್ನು ನಾಶ ಮಾಡುತ್ತದೆ ಎಂಬುದು ಶ್ಯಾಮ್ ಮನೋಹರ ಅವರ ಕೃತಿಗಳ ಕೇಂದ್ರ ನೆಲೆ. ಪಶ್ಚಿಮದ ಬೌದ್ಧಿಕ ದಾಳಿಯ ವಿರುದ್ಧ ನಿರಂತರ ಬರೆದವರು. ಈ ಅರ್ಥದಲ್ಲಿ ಕನ್ನಡದ ಯಶವಂತ ಚಿತ್ತಾಲರ ಬರವಣಿಗೆಯೊಂದಿಗೆ ಶ್ಯಾಮ್ ಅವರನ್ನು ಹೋಲಿಸಬಹುದು," ಎಂದು ಡಾ. ಬಿಳಿಮಲೆ ಬಣ್ಣಿಸಿದರು.

ಶ್ಯಾಮ್ ಮನೋಹರ್ ಅವರು ಎಂಟು ಕಾದಂಬರಿಗಳು, ಎಂಟು ನಾಟಕಗಳು ಹಾಗೂ ವಿಮರ್ಶಾ ಪ್ರಬಂಧಗಳನ್ನು ರಚಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಹತ್ತಾರು ಸಾಹಿತ್ಯ ಪ್ರಶಸ್ತಿಗಳು ಈವರೆಗೆ ಅವರ ಕೃತಿಗಳಿಗೆ ಸಂದಿವೆ. 1941ರಲ್ಲಿ ಜನಿಸಿದ ಅವರು ಪುಣೆಯ ಎಸ್.ಪಿ.ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು. ಮಹಾರಾಷ್ಟ್ರದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಇವರ ಕೃತಿಗಳನ್ನು ಪಠ್ಯಪುಸ್ತಕಗಳನ್ನಾಗಿ ಓದಿಸಲಾಗಿದೆ. ಕನ್ನಡ, ಗುಜರಾತಿ, ಬಂಗಾಳಿ, ಉರ್ದು, ಹಿಂದಿ, ಸಿಂಧಿ, ಇಂಗ್ಲಿಷಿಗೆ ಅವರ ಕೃತಿಗಳು ಅನುವಾದಗೊಂಡಿವೆ.

ಪ್ರೊ.ಎಚ್.ಎಸ್.ಶಿವಪ್ರಕಾಶ್, ಮಲೆಯಾಳಂ ಬರೆಹಗಾರ ಡಾ. ಕೆ. ಸಚ್ಚಿದಾನಂದನ್, ಡಾ.ಪುರುಷೋತ್ತಮ ಬಿಳಿಮಲೆ ಅವರನ್ನು ಒಳಗೊಂಡ ತೀರ್ಪುಗಾರರ ಸಮಿತಿಯು ಶ್ಯಾಮ್ ಮನೋಹರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದೆ. ಈ ಬಾರಿ ಪಶ್ಚಿಮ ಭಾರತದ (ಕೊಂಕಣಿ, ಮರಾಠಿ, ಗುಜರಾತಿ) ಬರೆಹಗಾರರನ್ನು ಈ ಪುರಸ್ಕಾರಕ್ಕೆ ಪರಿಗಣಿಸಲಾಗಿತ್ತು. ಈ ಹಿಂದಿನ ಎರಡು ಪುರಸ್ಕಾರಗಳನ್ನು ಅನುಕ್ರಮವಾಗಿ ದಕ್ಷಿಣದ ಡಾ.ಕೆ.ಸಚ್ಚಿದಾನಂದನ್ ಮತ್ತು ಉತ್ತರದ ಹಿಂದೀ ಸಾಹಿತಿ-ಚಿಂತಕ ಪ್ರೊ.ನಾಮವರ್ ಸಿಂಗ್ ಅವರಿಗೆ ನೀಡಲಾಗಿದೆ.

ಭಾರತೀಯ ಭಾಷೆಗಳ ಶ್ರೇಷ್ಠ ಸಾಹಿತಿಯೊಬ್ಬರಿಗೆ ಪ್ರತಿ ವರ್ಷ ಪ್ರಶಸ್ತಿ ನೀಡಲಾಗುತ್ತಿದೆ. 2013ನೇ ಸಾಲಿನ ಪ್ರಶಸ್ತಿಗೆ ಮಲೆಯಾಳಂ ಭಾಷೆಯ ಪ್ರಮುಖ ಲೇಖಕ ಕೆ. ಸಚ್ಚಿದಾನಂದನ್ ಮತ್ತು 2014ನೇ ಸಾಲಿನ ಪ್ರಶಸ್ತಿಗೆ ಹೆಸರಾಂತ ಹಿಂದಿ ಲೇಖಕ ಪ್ರೊ. ನಾಮವರ್ ಸಿಂಗ್ ಅವರನ್ನು ಆಯ್ಕೆ ಮಾಡಲಾಗಿತ್ತು ಎಂದೂ ಹಂಪನಾ ವಿವರಿಸಿದರು.

ಕುವೆಂಪು ಹೆಸರಿಡಲು ಆಗ್ರಹ: ದೆಹಲಿ ಪ್ರಮುಖ ರಸ್ತೆಯೊಂದಕ್ಕೆ ಕುವೆಂಪು ಅವರ ಹೆಸರಿಡಬೇಕು. ಮಹಾಕವಿ ಅಂಚೆ ಚೀಟಿ ಬಿಡುಗಡೆ ಮಾಡಬೇಕೆಂದು ಕುವೆಂಪು ಪ್ರತಿಷ್ಠಾನ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ. ಕೇಂದ್ರ ಸಚಿವರಾದ ಡಿ.ವಿ. ಸದಾನಂದಗೌಡ ಮತ್ತು ಬಿ.ಎಸ್. ಯಡ್ಯೂರಪ್ಪ ಅವರಿಗೆ ಪ್ರತಿಷ್ಠಾನ ಈ ಬಗ್ಗೆ ಮನವಿ ಸಲ್ಲಿಸಿದೆ. ಈ ಸಂಬಂಧ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ಗೌಡರು ಭರವಸೆ ನೀಡಿದ್ದಾರೆ ಎಂದು ಪ್ರೊ. ಹಂಪನಾ ತಿಳಿಸಿದರು. ಅ

*ಅಭಿಮತ ವರದಿ*

# ಕೌಶಲ್ಯ ಅಭಿವೃದ್ಧಿ ಶಿಕ್ಷಣ

ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಯ ನ್ಯಾಷನಲ್ ಸ್ಕಿಲ್ ಕ್ವಾಲಿಫಿಕೇಶನ್ ಫ್ರೇಮ್ ವರ್ಕ್ ತಯಾರಾಗಿದ್ದು, ಇದರಡಿ 2022ರ ವರೆಗೆ 500 ಮಿಲಿಯನ್ ಕೌಶಲ್ಯ ಪಡೆದಿರುವ ಮಾನವ ಸಂಪನ್ಮೂಲ ತಯಾರಿಸಿ ಔದ್ಯೋಗಿಕ ಜಗತ್ತಿಗೆ ಹಾಗೂ ಇನ್ನುಳಿದ ಕ್ಷೇತ್ರಕ್ಕೆ ನೀಡಬೇಕೆಂಬ ಸಂಕಲ್ಪ ಮಾಡಲಾಗಿದೆ. ಈ ಫ್ರೇಮ್ ವರ್ಕ್‌ನಲ್ಲಿ 10 ಮಟ್ಟಗಳಿದ್ದು (ಮಜಲುಗಳು) 1ನೇ ಲೆವೆಲ್ 9ನೇ ತರಗತಿಯಿಂದ ಆರಂಭಿಸಿ 4ನೇ ಮಟ್ಟ (9,10,11 ರಿಂದ 12ನೇ ತರಗತಿಯವರೆಗೆ ಶಾಲಾ ಶಿಕ್ಷಣದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುತ್ತಿದೆ.

ಈ ಕೌಶಲ್ಯ ಅಭಿವೃದ್ಧಿ ಶಿಕ್ಷಣ ನೀತಿಯಲ್ಲಿ ಭಾರತ ಸರಕಾರದ ಇನ್ನೊಂದು ಅಂಗ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಮಂಡಳಿ ಕೆಲ ಕ್ಷೇತ್ರಗಳನ್ನು ಗುರುತಿಸಿ, ಸೆಕ್ಟರ್ ಸ್ಕಿಲ್ ಕೌನ್ಸಿಲ್‌ಗಳನ್ನು ತಯಾರಿಸಿದೆ. ಹಾಗೇನೇ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು ಕೌಶಲ್ಯ ಶಿಕ್ಷಣ ನೀಡುವ ಕ್ಷೇತ್ರಗಳನ್ನು ಗುರುತಿಸಿದೆ. ಈ ಅಂಗಗಳು ಉದ್ಯೋಗ ಜಗತ್ತಿನೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಅವು ಶಾಲಾ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಕೌಶಲ್ಯಧಾರಿತ, ಪ್ರಾಯೋಗಿಕ ಶಿಕ್ಷಣ ನೀಡುವಲ್ಲಿ ಸಮರ್ಥವಾಗಿವೆ.

ಈ ಎರಡೂ ಅಂಗಗಳ ಮೂಲಕ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಯಾವುದೇ ತೊಂದರೆ ಇಲ್ಲದೆ ಔದ್ಯೋಗಿಕ ಜಗತ್ತಿನಲ್ಲಿ ಉದ್ಯೋಗ ಪಡೆದುಕೊಳ್ಳಬಹುದಾಗಿದೆ. ಈ ನ್ಯಾಷನಲ್ ಸ್ಕಿಲ್ ಕ್ವಾಲಿಫಿಕೇಶನ್ ಫ್ರೇಮ್ ವರ್ಕ್‌ನ ಅಡಿಯಲ್ಲಿ ವೃತ್ತಿಪರ ಶಿಕ್ಷಣಕ್ಕೆ ಒಂಭತ್ತನೇ ತರಗತಿಯಲ್ಲಿ ಸೇರಿ, ಸ್ನಾತಕ, ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ. ಡಿಗ್ರಿ ಸಹ ಪಡೆಯಬಹುದಾಗಿದೆ.

ಈ ಕೌಶಲ್ಯಾಭಿವೃದ್ಧಿ ಶಿಕ್ಷಣವನ್ನು ನೀವು ಸದ್ಯಕ್ಕಿರುವ ಶಿಕ್ಷಣದಿಂದ ನೇರ ವೃತ್ತಿಪರ ಶಿಕ್ಷಣಕ್ಕೆ ಆಯಾ ಮಟ್ಟದಲ್ಲಿ ಸೇರಬಹುದು. ಅಥವಾ ಬಿಟ್ಟು ಸಾಮಾನ್ಯ ಶಿಕ್ಷಣಕ್ಕೆ ಸೇರಿಕೊಳ್ಳಬಹುದು.

ಈ ಕೌಶಲ್ಯಾಭಿವೃದ್ಧಿ ಶಿಕ್ಷಣದಲ್ಲಿ ಮಲ್ಟಿ ಎಂಟ್ರಿ ಮತ್ತು ಮಲ್ಟಿ ಎಕ್ಸಿಟ್ ಅವಕಾಶಗಳಿವೆ. ಸೇರಬಯಸುವ ವಿದ್ಯಾರ್ಥಿಗಳು 12ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು. ಓಪನ್ ಸ್ಕೂಲಿಂಗ್ ಮಕ್ಕಳು ಸಹ ಈ ಶಿಕ್ಷಣದಲ್ಲಿ ಸೇರಿಕೊಂಡು ಮೊದಲನೇ ವರ್ಷ ಅಂದರೆ ಲೆವೆಲ್-5 ಪಾಸ್ ಮಾಡಿದಲ್ಲಿ ಡಿಪ್ಲೋಮಾ ಸರ್ಟಿಫಿಕೇಟ್ ಪಡೆದು ಹೊರ ಹೋಗಬಹುದು. ಲೆವೆಲ್-6 ಪಾಸ್ ಮಾಡಿದಲ್ಲಿ ಅಡ್ವಾನ್ಸ್ ಡಿಪ್ಲೋಮಾ ಸರ್ಟಿಫಿಕೇಟ್ ಪಡೆದು ಹೊರಹೋಗಬಹುದು. ಇಲ್ಲವೇ ಸ್ನಾತಕ ಪದವಿಯನ್ನು ಲೆವೆಲ್-7 ಪಾಸ್ ಮಾಡಿ ಪಡೆದುಕೊಳ್ಳಬಹುದಾಗಿದೆ.

ಈ ಕೌಶಲ್ಯಾಭಿವೃದ್ಧಿ ಶಿಕ್ಷಣದಲ್ಲಿ ಸೆಕ್ಟರ್ ಸ್ಕಿಲ್ ಕೌನ್ಸಿಲ್ ಹಾಗೂ ಸ್ಕಿಲ್ ನಾಲೇಜು ಪ್ರೊವೈಡರ್ಸ್, ವಿಶೇಷವಾದ ಪ್ರಾಯೋಗಿಕ, ತರಬೇತಿ ನೀಡಿ, ವಿದ್ಯಾರ್ಥಿಗಳಲ್ಲಿ ಕೌಶಲ್ಯ ತುಂಬಿ ಇಂಡಸ್ಟ್ರಿಗಳಿಗೆ ನೇರವಾಗಿ ಸಂಪರ್ಕ ಕಲ್ಪಿಸಿ, ಉದ್ಯೋಗ ಪಡೆದುಕೊಳ್ಳಲು ನೆರವಾಗುತ್ತದೆ.

ಈ ಕೌಶಲ್ಯ ಶಿಕ್ಷಣ ನೀತಿ ಯಶಸ್ವಿಯಾಗುವ ನಿಟ್ಟಿನಲ್ಲಿ ನಮ್ಮ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಕಾರ್ಯನಿರತವಾಗಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗ ಹಾಗೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಗಳು ಎಲ್ಲ ಶಿಕ್ಷಣ ಕ್ಷೇತ್ರಗಳಲ್ಲಿ ಈ ಕೌಶಲ್ಯಾಧಾರಿತ ಶಿಕ್ಷಣವನ್ನು 2017ರವರೆಗೆ ಅಳವಡಿಸಲೇಬೇಕೆಂಬ ಆದೇಶ ನೀಡಿವೆ. ದೆಹಲಿಯಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಗುರು ಗೋವಿಂದ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಮುಖಾಂತರ ಒಂಭತ್ತು ಸರಕಾರಿ ತಾಂತ್ರಿಕ ಶಿಕ್ಷಣ ಇನ್ಸಿಟ್ಯೂಟ್‌ಗಳಲ್ಲಿ ಸುಮಾರು 10 ಸೆಕ್ಟರ್‌ಗಳಲ್ಲಿ ಬ್ಯಾಚುಲರ್ ಇನ್ ವೊಕೇಶನಲ್ ಡಿಗ್ರಿ ಆರಂಭಿಸುತ್ತಿದ್ದು, ಅದರ ಜವಾಬ್ದಾರಿಯನ್ನು ನಮ್ಮ ತಾಂತ್ರಿಕ ಶಿಕ್ಷಣಾಲಯ ನನಗೆ ನೀಡಿದ್ದು ನನ್ನನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿದೆ. ಇದೇ ಶೈಕ್ಷಣಿಕ ವರ್ಷದಿಂದ ಸುಮಾರು 1800 ಸೀಟುಗಳನ್ನು ತುಂಬಿ, ಬ್ಯಾಚುಲರ್ ಇನ್ ವೊಕೇಶನಲ್ ಡಿಗ್ರಿ ಆರಂಭಿಸಲಾಗುತ್ತದೆ. ಅ

***ಎಸ್.ಎಲ್. ಭಂಡಾರ್‌ಕರ್***

# ದೆಹಲಿ ತುಳುಸಿರಿ ಅಧ್ಯಕ್ಷರಾಗಿ ಡಾ. ಪುರುಷೋತ್ತಮ ಬಿಳಿಮಲೆ ಆಯ್ಕೆ



ತುಳು ಭಾಷೆ ಮತ್ತು ಸಂಸ್ಕೃತಿಯ ಕುರಿತು ದೆಹಲಿಯಲ್ಲಿ ಚಟುವಟಿಕೆಗಳನ್ನು ನಡೆಸುತ್ತಿರುವ ಸಂಸ್ಥೆ ದೆಹಲಿ ತುಳು ಸಿರಿಯ ಅಧ್ಯಕ್ಷರಾಗಿ ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಇದೇ ಆಗಸ್ಟ್ 9ರಂದು ದೆಹಲಿಯಲ್ಲಿ ನಡೆದ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹೊಸ ಆಡಳಿತ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಶ್ರೀ ಕೆ.ಆರ್. ರಾಮಮೂರ್ತಿ ಮತ್ತು ಡಾ. ಸಾಯಿ ಪ್ರಶಾಂತಿ ಶೆಟ್ಟಿ, ಕಾರ್ಯದರ್ಶಿಯಾಗಿ ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಕೋಶಾಧಿಕಾರಿಯಾಗಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಹಾಗೂ ಜತೆ ಕಾರ್ಯದರ್ಶಿಯಾಗಿ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಮತ್ತು ಶ್ರೀ ಪ್ರದೀಪ್ ಕುಮಾರ್ ಆಯ್ಕೆಯಾಗಿದ್ದಾರೆ. ಶ್ರೀಮತಿ ವಂದನಾ ಶೆಟ್ಟಿ, ಶ್ರೀಮತಿ ಮಾಲಿನಿ ರಾವ್ ಮತ್ತು ಶ್ರೀಮತಿ ವೃದ್ಧಿ ಕಾರಿಂಜೆ ಅವರು ಸಮಿತಿ ಸದಸ್ಯರಾಗಿದ್ದಾರೆ. ಅ

***ಬಾಲಕೃಷ್ಣ ನಾಯ್ಕ್ ಡಿ.***

## ಒದುಗರ ಪತ್ರ




ಜುಲೈ 2015ರ ಅಭಿಮತದಲ್ಲಿ ಪ್ರಕಟಗೊಂಡ ಸವಿತಾ ಇನಾಮದಾರ ಅವರ ನಮ್ಮ ಮುಕುಟ ಮಣಿ ಓದಿ ಖೇದವೆನಿಸಿದೆ. ಈ ವಾಸ್ತವ ಕಾಶ್ಮೀರ ಕಣಿವೆಯಲ್ಲಿ ಅಷ್ಟೇ ಅಲ್ಲ; ದೇಶದ ಮೂಲೆ ಮೂಲೆಯಲ್ಲಿಯೂ ತಾಂಡವಾಡುತ್ತಿದೆ. ಇದರ ಕಾರಣಕರ್ತರಾರು? ಇದಕ್ಕೆ ಸೂಕ್ತ ಪರಿಹಾರ ಎಲ್ಲಿ? ಅ

***ಎಚ್. ಚಂದ್ರಶೇಖರ್***

# ಅಭಿನಂದನೆ



ಜನಕಪುರಿ ಕನ್ನಡ ಕೂಟ ಮತ್ತು ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾದ ಶ್ರೀ ಎಸ್.ಎಲ್. ಭಂಡಾರ್‌ಕರ್ ಅವರು ದೆಹಲಿ ಸರಕಾರದ ತಾಂತ್ರಿಕ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ವಿಭಾಗದ ಉಪನಿರ್ದೇಶಕರ ಕಾರ್ಯಭಾರವನ್ನು ಇದೇ ಸಪ್ಟಂಬರ್ 1ರಿಂದ ವಹಿಸಿರುತ್ತಾರೆ. ಅವರು ಅಧಿಕಾರ ವಹಿಸಿರುವ ಈ ವಿಭಾಗದಲ್ಲಿ ಐದು ವಿಶ್ವವಿದ್ಯಾಲಯಗಳು ಮತ್ತು ದೆಹಲಿಯ ಸರಕಾರಿ ಇಂಜಿನಿಯರಿಂಗ್ ಕಾಲೇಜುಗಳು ಸೇರಿಕೊಂಡಿವೆ. ಅವರಿಗೆ ಶುಭ ಹಾರೈಕೆಗಳು. ಅ

***ಬಿ.ಕೆ. ಬಸವರಾಜು***





# ಸೂಚನಾ ಫಲಕಗಳು

ಒಂದೆಡೆ ಬೆಳಕಿನ ಕಿರಣಗಳು ಪ್ರತಿಫಲಿಸುತ್ತಿದ್ದರೆ ಇನ್ನೊಂದೆಡೆ ಕತ್ತಲಿನ ಗಾಢತೆ ಆವರಿಸಿರುತ್ತದೆ. ಆಕ್ರಮಣಗೊಂಡ ಮುಗ್ದರು ಹೊಸದೊಂದು ನೆಲದಲ್ಲಿ ತಮ್ಮ ಕನಸುಗಳನ್ನು ಚಿಗುರಿಸಲು ಸಮುದ್ರಗಳನ್ನು ದಾಟಿ ಬೇಕಾದರೂ ಹೋಗುವೆವು ಎಂದುಕೊಂಡರೆ ಆಳ ಸಮುದ್ರವೇ ಬೇಲಿಯಾಗುತ್ತದೆ. ಅದರ ದಡದಲ್ಲಿ ಚಿರನಿದ್ರೆಯಲ್ಲಿ ಮಲಗಿದ ಮಗು ನಮ್ಮೆಲ್ಲರ ಎದೆಯಲ್ಲಿ ಈ ಸುಂದರ ಜಗತ್ತು ಅದೆಷ್ಟು ಕ್ರೂರಿ ಎಂದು ತೋರಿಸುತ್ತದೆ.

ಜಂಗಮನೊಬ್ಬ ಸಾರಿದ ಬದುಕಿನ ನಿತ್ಯದ ಸತ್ಯಗಳನ್ನು ಆಡಿದರೆ, ಬರೆದರೆ, ಬದುಕಿದರೆ ಅದು ಗುಂಡಿನ ಗಾಯಕ್ಕೆ ಬಲಿಯಾಗುತ್ತದೆ. ಮುಕ್ತವಾದ ವಾತಾವರಣದಲ್ಲಿ ಕಟ್ಟಿಹಾಕುವ, ನಗ್ನಗೊಳಿಸುವ ನಮ್ಮ ಮನಸ್ಸುಗಳು ನಾಗರೀಕತೆಯ ಅಳಿವಿನ ಸೂಚನೆಯೋ ಎಂಬ ಸಂದೇಹದ ಗೂಡನ್ನು ಕಟ್ಟುತ್ತವೆ. ದೆಹಲಿ ಕರ್ನಾಟಕ ಸಂಘದಲ್ಲಿ ಆಗಸ್ಟ್ ಅಂತ್ಯದಲ್ಲಿ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಸಡಗರದ ಸಂಭ್ರಮದ ನಡುವೆ ಧಾರವಾಡದಲ್ಲಿ ಗುಂಡಿಗೆ ಬಲಿಯಾದ ಎಂ.ಎಂ ಕಲಬುರ್ಗಿಯವರು ತಿಂಗಳ ಹಿಂದೆಯಷ್ಟೇ ಸಂಘದಲ್ಲಿ ಆಡಿದ ಮಾತುಗಳು ಪ್ರತಿಧ್ವನಿಸುತ್ತಿರುತ್ತವೆ. ಬದುಕಿನ ಅಪೂರ್ವ ಕ್ಷಣಗಳು ಎತ್ತಲಾಗದ ಭಾರವಾದಾಗ ಒಂದು ಸಮಾಜವೇ ಕುಸಿದು ಹೋಗುತ್ತದೆ.

ದೆಹಲಿಯ ಕನ್ನಡ ಮನಸ್ಸುಗಳು ಇಂತಹ ಸ್ಥಿತಿಯಲ್ಲಿಯೂ ಎಚ್ಚರದಿಂದ ತಮ್ಮೊಳಗಿನ ವಿರೋಧಗಳನ್ನು ಚೆಲ್ಲಿಕೊಂಡು ಕ್ರಿಯಾತ್ಮಕವಾಗಿ ಮತ್ತು ಸೃಜನಾತ್ಮಕವಾಗಿ ಪ್ರತಿಕ್ರಿಯಿಸುತ್ತವೆ. ಒಂದೆಡೆ ಶರತ್ ಜವಳಿಯವರು ಉದ್ವೇಗದಿಂದ ತನ್ನೊಳಗಿನ ಭಾವನೆಗಳಿಗೆ ಮಾತಾಗುತ್ತಾರೆ. ಇನ್ನೊಂದೆಡೆ ಶಿವಾನಂದ ಇಂಗಳೇಶ್ವರರು ರಕ್ತರಾತ್ರಿಯಲ್ಲಿ ಯುದ್ಧದ ಕ್ರೌರ್ಯವನ್ನು ರಂಗದಲ್ಲಿ ಪ್ರತಿಭಟಿಸುತ್ತಾರೆ. ಇಂತಹ ಎಚ್ಚರಿಕೆಯ ಸೂಚನಾ ಫಲಕಗಳು ತಮ್ಮ ಕೆಲಸಗಳನ್ನು ಮಾಡುತ್ತಲೇ ಇರಲಿ.

ಅಭಿಮತದ ಇಪ್ಪತ್ತೈದನೇ ಸಂಪುಟದ ಕೊನೆಯ ಸಂಚಿಕೆಯ ತಯಾರಿಯಲ್ಲಿರುವಾಗಲೇ ಬೆಳ್ಳಿ ಸಂಪುಟದ ವಿಶೇಷ ಸಂಚಿಕೆಯೂ ಅಚ್ಚಿನ ಮನೆಯಲ್ಲಿದೆ. ದೆಹಲಿ ಮಿತ್ರ ವಸಂತರ ಮನ್ನಿಸಲಾಗದ ಒತ್ತಾಯಕ್ಕೆ ಆತ್ಮೀಯ ಪ್ರಕಾಶನೊಡನೆ ಅಭಿಮತದ ಈ ಇಪ್ಪತ್ತಾರು ಸಂಚಿಕೆಗಳ ಒಂದು ಪರ್ವದ ಕೆಲಸಗಳನ್ನು ಮುಗಿಸುವಾಗ ಗುರು ಪುರುಷೋತ್ತಮ ಬಿಳಿಮಲೆಯವರು, ಸ್ನೇಹಿತ ಅವನೀಂದ್ರನಾಥ ಮತ್ತು ನಾಗರಾಜ, ಪುಟಗಳಿಗೆ ಅಕ್ಷರಗಳನ್ನು ಕೊಡಿಸಿದ ಅಭಿಮತದ ಲೇಖಕ ಬಳಗ, ಎಲ್ಲೆಡೆ ಹಬ್ಬಿರುವ ಓದುಗರು, ಜತೆಗೆ ಸವಿತಾ ಮತ್ತು ಆಶಾ, ಅಭಿಮತದ ನೆನಪುಗಳನ್ನು ನಿರಂತರ ಹಸಿರಾಗಿಸುವಲ್ಲಿ ಬಹಳಷ್ಟು ಕೊಟ್ಟಿದ್ದಾರೆ. ಬಾಲಚಂದ್ರ, ಶೇಖರ್... ನಿಮ್ಮನ್ನು ಬಿಡಲಾಗದು. ಇದನ್ನು ಇಲ್ಲಿಗೆ ಮುಗಿಸುವ. ಮಾಡಲು ಇನ್ನಷ್ಟು ಇದೆ.

***ಬಾಲಕೃಷ್ಣ ನಾಯ್ಕ್ ಡಿ.***





# ಅಗಲಿದ ಕನ್ನಡದ ಕಟ್ಟಾಳುಗಳಿಗೆ ಶ್ರದ್ಧಾಂಜಲಿ

## ನಾಡೋಜ ಕೈಯ್ಯಾರ ಕಿಞ್ಞಣ್ಣ ರೈ



ಕವಿ ಸಾಹಿತಿ, ಲೇಖಕ, ಸ್ವಾತಂತ್ರ್ಯಹೋರಾಟಗಾರ, ಎಲ್ಲಕ್ಕಿಂತ ಹೆಚ್ಚಾಗಿ ಗಡಿನಾಡಿನಲ್ಲಿ ಕನ್ನಡ ಧ್ವನಿಯಾಗಿದ್ದ ಶತಾಯುಷಿ, ನಾಡೋಜ ಕೈಯ್ಯಾರ ಕಿಞ್ಞಣ್ಣ ರೈ ಅವರು ಇದೇ ಅಗಸ್ಟ್ ೯ರಂದು ಕಾಸರಗೋಡು ಜಿಲ್ಲೆಯ ಪೆರಡಾಲದಲ್ಲಿ ತಮ್ಮ 101ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

## ಸಂಶೋಧಕ ಡಾ. ಎಂ.ಎಂ. ಕಲಬುರ್ಗಿ



ಹಂಪಿ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ, ಖ್ಯಾತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿ ಅವರು ಆಗಸ್ಟ್ ೩೦ರಂದು ಧಾರವಾಡದಲ್ಲಿ ದುಷ್ಕರ್ಮಿಗಳ ಗುಂಡಿಗೆ ಬಲಿಯಾಗಿ ನಿಧನರಾಗಿದ್ದಾರೆ. ಅವರು ಕಳೆದ ತಿಂಗಳಷ್ಟೆ ದೆಹಲಿ ಕರ್ನಾಟಕ ಸಂಘದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


**SAUJANYA** PRINTING PRESS

A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Sept-2015, Vol. No.25, Issue No.10, Price Rs.1/-  RNI Regn. No. 53405/91, DL-SW-1/4016/13-15
Printout Date : Sept 8th / 9th, Postal Date :10th  / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.













